ಕಲ್ಯಾಣ ಕಿರಣ

ಡಿಸೆಂಬರ್ - 2011 ಬೆಲೆ-10/-

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666





ಭದ್ರಾವತಿ ಬಸವ ಮಂಟಪದ ಕಟ್ಟಡ ಅಧ್ಯಕ್ಷ ಬಿ.ಸಿ. ಮಹಾಲಿಂಗಪ್ಪ ಮತ್ತು ರತ್ನಮ್ಮ



ಭದ್ರಾವತಿ ಬಸವ ಕರುಣಾಶ್ರಯ ಉದ್ಘಾಟನಾ ಸಮಾರಂಭದಲ್ಲಿ ಪರಮ ಪೂಜ್ಯ ಮಾತಾಜಿಯವರನ್ನು ಭಕ್ತಿಯಿಂದ ಸ್ವಾಗತಿಸುತಿರುವ ಶರಣ ಸಮೂಹ



ದಿ. 11-11-2011 ಭದ್ರಾವತಿ ರಾಷ್ಟ್ರೀಯ ಬಸವ ದಳದ ಬಸವ ಕರುಣಾಶ್ರಯ ಉದ್ಘಾಟನೆಯ ನಂತರ ನಡೆದ ಧಾರ್ಮಿಕ ಸಭೆ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-41	ಬಸವ ಶಕೆ -878	ಪಂಚವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-12	ಡಿಸೆಂಬರ್- 2011	ವಾರ್ಷಿಕ ಚಂದಾ 200 ರೂ.

ಬಸವಾತ್ಮಜೆಯ ಕರೆ

ಬಾ ಬಾ ಬಾ ಎಲೆ ಶರಣ ನೀನು......
ಶರಣ ಮೇಳಕೆ ಬಂದು ಪಾವನನಾಗು ॥ ಪ ॥

ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ.ಪ.॥

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥

ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು ॥ 3 ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? ॥ 4 ॥

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ 5 ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯಾ ಕರೆಯಿದು ॥ 6 ॥

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು.

★ಕಲ್ಯಾಣ ಕಿರಣ★

ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಶರಣ ಮೇಳಕ್ಕೆ ಆಹ್ವಾನ	ಮಾತಾಜಿ	1
2. ಇಪ್ಪತ್ತೈದನೆಯ ಶರಣ ಮೇಳ		3
3. ಬಸವ ವಚನಾಮೃತ ಭಾಗ -38	ಮಾತಾಜಿ	5
4. ನೆನಪಿನ ಬುತ್ತಿ ಬಿಚ್ಚಿದಾಗ- 5	ಮಾತಾಜಿ	26
5. ಶರಣ ಸಂಗಮ ವಿಶೇಷ ಸ್ಮರಣ ಸಂಚಿಕೆ ವಿವರ	ಮಾತಾಜಿ	32

ಮುಖಪುಟ: ಭದ್ರಾವತಿ ರಾಷ್ಟ್ರೀಯ ಬಸವ ದಳದ ಬಸವ ಮಂಟಪ,
ಬಸವ ಕರುಣಾಶ್ರಯ ಉಚಿತ ವಿದ್ಯಾರ್ಥಿ ನಿಲಯದೊಡನೆ.

ಕೆಳಗಿನ ಚಿತ್ರ: ಪೂಜ್ಯ ಮಾತಾದ್ವಯರನ್ನು ಸ್ವಾಗತಿಸುತ್ತಿರುವ ಭದ್ರಾವತಿಯ ಶರಣ ಬಂಧುಗಳು

ಒಳ ಚಿತ್ರ : ಉದಾರ ದಾನಿಗಳಾದ ಶರಣ ಮಹಾಲಿಂಗಪ್ಪ ಮತ್ತು ಶರಣೆ ರತ್ನಮ್ಮ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು.ಈಗಾಗಲೇ 2 ವ್ರತಗಳನ್ನು ಪ್ರಾರಂಭಿಸುವ ದಿವಸಗಳು ಮುಗಿದಿದೆ. 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2012ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

ಶರಣ ಬಂಧುಗಳಲ್ಲಿ ವಿನಂತಿ

ಕಲ್ಯಾಣ ಕಿರಣ ತಲುಪದಿದ್ದಲ್ಲಿ ನಿಮ್ಮ ಚಂದಾ ಸಂಖ್ಯೆ, ಪೂರ್ಣ ವಿಳಾಸ, ಪಿನ್‌ಕೋಡ್, ದೂರವಾಣಿ ಸಂಖ್ಯೆ ಯಾವ ತಿಂಗಳು ತಲುಪಿಲ್ಲ ಸವಿವರವಾಗಿ ಈ ದೂರವಾಣಿ ಸಂಖ್ಯೆಗಳಿಗೆ 7760627640, 8892912123 ಎಸ್.ಎಂ.ಎಸ್. ಮುಖಾಂತರ ಕಳುಹಿಸಿರಿ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 080-23131476, 22923736



II ಓಂ ಶ್ರೀ ಗುರು ಬಸವ ಲಿಂಗಾಯ ನಮಃ II

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಇಪ್ಪತ್ತೈದನೆಯ ಶರಣ ಮೇಳ

ರಜತ ಮಹೋತ್ಸವ

2012ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೈದನೆಯ ಶರಣ ಮೇಳವು 2012ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ

ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 150 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂ : 08351-268014/268007/268140

ಬಸವ ವಚನಾಮೃತ

675. ನೇಮ ಪಾಲನೆ ಅವಶ್ಯಕ

ಒಡನೆ ಹುಟ್ಟಿದುದಲ್ಲ, ಒಡನೆ ಬೆಳೆದುದಲ್ಲ;
ಎಡೆಯಲಾದ ಒಂದು ಉಡುಗೆಯನ್ನುಟ್ಟು,
ಸಡಿಲಿದಡೆ ಲಜ್ಜೆನಾಚಿಕೆಯಾಯಿತ್ತೆಂಬ
ನುಡಿ ದಿಟವಾಯಿತ್ತು ಲೌಕಿಕದಲ್ಲಿ
ಹಡೆದ ಗುರುಕರುಣದೊಡನೆ ಹುಟ್ಟಿದ
ನೇಮವನು ಬಿಡದಿರೆಲವೋ?
ಬಿಟ್ಟಡೆ ಕಷ್ಟ, ಲಿಂಗದೇವನಡಸಿ
ಕೆಡಹುವ ನಾಯಕ ನರಕದಲ್ಲಿ ! –ಬ.ವ.ದೀ 674

ಮನುಷ್ಯ ಹುಟ್ಟುತ್ತ ಬತ್ತಲೆ, ಬಟ್ಟೆಯು ಹುಟ್ಟುತ್ತಲೇ ಬಂದಿರುವುದಿಲ್ಲ, ಬೆಳೆಯುತ್ತಲೂ ಅದು ಬೆಳೆಯುವುದಿಲ್ಲ. ಪುನಃ ಹೋಗುವಾಗಲೂ ಬತ್ತಲೆಯೇ! ಮಧ್ಯಂತರದಲ್ಲಿ ಬಂದ ಬಟ್ಟೆ ಸ್ವಲ್ಪ ಸಡಲಿದರೆ ಲಜ್ಜೆಯಾಯಿತೆಂದು ಸರಿಪಡಿಸಿಕೊಳ್ಳುವರು; ಇದು ಲೌಕಿಕದಲ್ಲಿ ನಡೆದು ಬಂದಿರುವ ರೀತಿ. ಮಗು ಹುಟ್ಟಿದ ತಕ್ಷಣ ಮಾಡುವ ಕ್ರಿಯೆ ಲಿಂಗಧಾರಣೆ (ಮಗು ಹುಟ್ಟಿದ ತಕ್ಷಣ ಲಿಂಗಧಾರಣೆ ಮಾಡಿ, ಜೇನುತುಪ್ಪ ನಾಲಿಗೆಗೆ ಸವರಿ ನಂತರ ತಾಯಿಯ ಎದೆಹಾಲು ಕುಡಿಸುವುದು ಶರಣ ಸಂಪ್ರದಾಯ. ಈಗಿನ ಜನ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿ ನಂತರ ಎಂದೋ ಒಂದು ದಿನ ಲಿಂಗಧಾರಣೆ ಮಾಡುವರು. ಇದರ ಹಿನ್ನೆಲೆಯಲ್ಲಿ ವಚನವನ್ನು ಅರ್ಥಮಾಡಬಾರದು) ಲಿಂಗಧಾರಣೆ, ಲಿಂಗಾಯತ ಧರ್ಮದ ಅನುಯಾಯಿಗೆ ಹುಟ್ಟಿದಾಕ್ಷಣ ಬರುತ್ತದೆ. ಇಂಥ ನೇಮವನ್ನು ಬಿಡಬೇಡಿರಿ. ಬಿಟ್ಟರೆ ಅದು ದೇವದ್ರೋಹ; ದೇವರು ನಾಯಕ ನರಕದಲ್ಲಿ ಕೆಡಹುವನು.

676. ಶರಣನಿಗೆ ಛಲಬೇಕು

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗಜಂಗಮ ಒಂದೆ ಎಂಬ;
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ;
ಛಲಬೇಕು ಶರಣಂಗೆ ಪರವಾದಿ ನಿಗ್ರಹದಲ್ಲಿ
ಛಲವಿಲ್ಲದವರ ಮೆಚ್ಚ ಲಿಂಗದೇವ. –ಬ.ವ.ದೀ 675

ಶರಣ ಪಥಿಕನಾದವಂಗೆ ಕೆಲವು ವಿಷಯಗಳಲ್ಲಿ ಛಲ, ದೃಢತೆ, ತತ್ತ್ವನಿಷ್ಠೆ ಇರಬೇಕು. ಗುರು ಬಸವಣ್ಣನವರ ಜನಪ್ರಿಯ ಮತ್ತು ಉಪಯುಕ್ತ ವಚನಗಳಲ್ಲಿ ಇದೂ ಒಂದು. ಆದರೆ ಬಹುಪಾಲು ಜನರು ಕೆಲವು ವಾಕ್ಯಗಳನ್ನು ಕತ್ತರಿಸಿ ಬಳಸುವರು. ನಾವು ಪೂರ್ತಿ ವಚನವನ್ನು ನೋಡೋಣ.

ತಾನು ಕಾಯಕದಿಂದ ದುಡಿದುದಲ್ಲದ ಪರಧನವನ್ನು ಶರಣನು ನಿರಾಕರಿಸಬೇಕು. ತನ್ನದಲ್ಲದ ಸೊತ್ತಿಗೆ ಆಸೆ ಪಡಬಾರದು. ಪರಸ್ತ್ರೀಯರ ಸಂಗವನ್ನು ಬಯಸಬಾರದು. ತನ್ನ ಪತ್ನಿಯಲ್ಲೇ ಏಕ ನಿಷ್ಠೆಯನ್ನು ಹೊಂದಿರಬೇಕು. ಪಾತಿವ್ರತ್ಯವು ಅಂದರೆ ಏಕಪತಿ ನಿಷ್ಠೆ ಸ್ತ್ರೀಗೆ ಎಷ್ಟು ಅಗತ್ಯವೋ ಏಕಪತ್ನಿ ನಿಷ್ಠೆಯೂ ಪುರುಷನಿಗೆ ಅತ್ಯಗತ್ಯ. ಪರಸ್ತ್ರೀಯನ್ನು ತಾಯಿ ಎಂದು ಕಾಣಬೇಕು. ಸೃಷ್ಟಿಕರ್ತನ ಹೊರತು ಅನ್ಯ ದೈವವನ್ನು ಪೂಜಿಸೆ ಎಂಬ ಛಲ ಶರಣನಲ್ಲಿರಬೇಕು. ಲಿಂಗ ಜಂಗಮ ಒಂದೆ ಎಂಬ ವಿಶ್ವಾಸ ಶರಣನಿಗೆ ಬೇಕು. ದೇವರು ನಿರಾಕಾರ ಅವನ ಸಾಕಾರ ರೂಪವೇ ಜಂಗಮರು ತ್ಯಾಗಿಗಳು, ಯೋಗಿಗಳು, ಸಮಾಜ ಸೇವಕರು. ಸಮಾಜವೇ ಜಂಗಮ, ನಿರಾಕಾರ ದೇವರ ಪೂಜೆ ಮಾಡಬೇಕು, ಸಾಕಾರ ಜಂಗಮದ ಸೇವೆ ಮಾಡಬೇಕು. ತನು ಮನ ಧನಗಳು ಜಂಗಮದ ಸೇವೆಯಲ್ಲಿ ಸವೆಯಬೇಕು. ಶರಣನಿಗೆ ಪ್ರಸಾದ ತತ್ತ್ವದಲ್ಲಿ ಪೂರ್ಣಶ್ರದ್ಧೆ ಇರಬೇಕು. ಪರಮಾತ್ಮನ ಕರುಣೆಯಿಂದ ಅಸಾಧ್ಯ ಸಾಧ್ಯವಾಗುವುದು ಎಂಬ ನಂಬಿಕೆ ಬೆಳೆಯಬೇಕು. ನಿತ್ಯವೂ ಪೂಜಾನಂತರ ಸ್ವೀಕರಿಸುವ ಕರುಣ ಪ್ರಸಾದದ ಬಗ್ಗೆ ನಿಷ್ಠೆ ಇರಬೇಕು. ಶರಣನಿಗೆ ಪರವಾದಿಯನ್ನು ನಿಗ್ರಹಿಸುವಲ್ಲಿ ಛಲ ಇರಬೇಕು. ತತ್ತ್ವ ಸಿದ್ಧಾಂತಗಳ ಬಗ್ಗೆ ಸರಿಯಾದ ಜ್ಞಾನವನ್ನು ಹೊಂದಿ ಅದನ್ನು ಇತರರಿಗೆ ಮನವರಿಕೆ ಮಾಡಿಕೊಡುವಲ್ಲಿ ಆಸಕ್ತಿ, ಛಲ ಇರಬೇಕು. ಸತ್ಯವನ್ನು ಪ್ರತಿಷ್ಠಾಪಿಸುವಲ್ಲಿ, ವಾದಿಸುವಲ್ಲಿ ಛಲ ಇರಬೇಕು. ಈ ಯಾವ ಛಲವೂ ಇಲ್ಲದ ಹೇಡಿಗಳನ್ನು ಮಾನಸಿಕ ದುರ್ಬಲರನ್ನು ಲಿಂಗದೇವನು ಮೆಚ್ಚಿಕೊಳ್ಳನು.

677. ಗೆಲ್ಲುವವರು ಅಂತಿಮವಾಗಿ ಭಕ್ತರೆ

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯಾ ಎರಡಾಳಿನ ಭಾಷೆಯ
ಕೊಲುವೆನೆಂಬ ಭಾಷೆ ದೇವನದು; ಗೆಲುವೆನೆಂಬ ಭಾಷೆ ಭಕ್ತನದು,
ಸತ್ಯವೆಂಬ ಕೂರಲಗನೆ ತಳೆದುಕೊಂಡು
ಸದ್ಭಕ್ತರು ಗೆದ್ದರು ಕಾಣಾ, ಲಿಂಗದೇವಾ. –ಬ.ವ.ದೀ 676

ಇಂದಿನ ಭಾರತವನ್ನು ಅಂದು ಜಂಬೂದ್ವೀಪ ಎಂದು ಕರೆಯಲಾಗುತ್ತಿತ್ತು. ಮತ್ತು ಭೂಮಂಡಲದ ಮೇಲೆ ಒಂಬತ್ತು ಖಂಡಗಳಿವೆ ಎಂದು ನಂಬಲಾಗುತ್ತಿತ್ತು ಇಂಥ ಇಡೀ ಜಗತ್ತನ್ನು ಉದ್ದೇಶಿಸಿ ಗುರು ಬಸವಣ್ಣನವರು ಘೋಷಿಸುತ್ತಾರೆ. "ಇಲ್ಲಿ ಸದಾ ಒಂದು ಹೋರಾಟ ನಡೆಯುತ್ತಿದೆ. ಅದು ಇಬ್ಬರ ಮಧ್ಯೆ ನಡೆಯುವ ಹೋರಾಟ ಈ ಇಬ್ಬರೆಂದರೆ ದೇವರು ಮತ್ತು ಭಕ್ತ. ದೇವರು ತನ್ನನ್ನು ನಂಬಿದ ಭಕ್ತರನ್ನು ತೀವ್ರ ಸಂಕಷ್ಟಕ್ಕೆ ಗುರಿ ಮಾಡಿ ಪರೀಕ್ಷಿಸುತ್ತಾನೆ. ಸೋಲಿಸಲು ಹಿಮ್ಮೆಟ್ಟಿಸಲು ಛಲ ತೊಡುತ್ತಾನೆ. ಆದರೆ ದೃಢ ಚಿತ್ತದ ಭಕ್ತ ತಾನು ಗೆಲ್ಲಲು ಪಣ ತೊಡುತ್ತಾನೆ. ಅಂತಿಮವಾದ ಜಯ ಜಗತ್ತಿನ ಇತಿಹಾಸದಲ್ಲಿ ಭಕ್ತನದೇ ಆಗಿದೆ. ಸಾಕಷ್ಟು ಸಂಕಷ್ಟವನ್ನು ನೀಡಿದ ದೇವರು ಕಡೆಗೆ ಸೋತು ಭಕ್ತನಿಗೇ ಒಲಿದು ಶರಣಾಗುತ್ತಾನೆ. ಹೀಗೆ ಭಕ್ತನು ಗೆಲ್ಲಲು ಕಾರಣವೇನೆಂದರೆ ಅವನ ಕೈಲಿ ಸತ್ಯವೆಂಬ ಕೂರಲಗು ಇದೆ. ಸತ್ಯಕ್ಕೇ ಅಂತಿಮ ಜಯ."

ಈ ವಚನವು ಸಾಧಕರಿಗೆ, ಸತ್ಯವಾದಿಗಳಿಗೆ, ತತ್ತ್ವನಿಷ್ಠರಿಗೆ ಮರಳುಗಾಡಿನಲ್ಲಿ ಓಯಸಿಸ್ ಇದ್ದಂತೆ ಇದೆ. ಏಕೆಂದರೆ ಪ್ರವಾಹ ಪತಿತರಿಗೆ ಸಂಕಷ್ಟಗಳು ಕಡಿಮೆ, ಸಂಪ್ರದಾಯದ ವಿರುದ್ಧ

ಸೆಣಸುವವರಿಗೆ ಕಷ್ಟಗಳು, ವಿರೋಧಗಳು ವಿಪುಲ, ಸತ್ಯದ ದಾರಿ ಹೂವಿನದಲ್ಲ ಮುಳ್ಳು ಕಲ್ಲಿನದು. ನಡೆಯುವವನು ಎದೆಗೆಡಬಾರದೆಂದು ಅಂತಿಮ ಜಯ ಅವನದೇ ಎಂದು ವಿಶ್ವಗುರು ಬಸವಣ್ಣನವರು ಸಾಧಕರಲ್ಲಿ ಆತ್ಮಸ್ಥೈರ್ಯವನ್ನು ತುಂಬುವರು.

ಗುರು ಬಸವಣ್ಣನವರ ನೇತೃತ್ವದಲ್ಲಿ ನಡೆದ ಹರಳಯ್ಯ–ಮಧುವರಸರ ನೆಂಟಸ್ತಿಕೆ, ಲಾವಣ್ಯಾವತಿ –ಶೀಲವಂತರ ವಿವಾಹ ಅಂದು ಸಂಪ್ರದಾಯದ ದೃಷ್ಟಿಯಲ್ಲಿ ಘೋರ ಅಪರಾಧ. ಆದರಿಂದು ಅದು ಅಸಾಮಾನ್ಯ ಆದರ್ಶ. ಈ ಸತ್ಯವನ್ನು ಅರಿಯಲು ಸಮಾಜಕ್ಕೆ 800 ವರ್ಷ ಹಿಡಿಯಿತು. ತಡವಾದರೂ ಸತ್ಯವೇ ಗೆದ್ದಿತಲ್ಲವೆ ?

677. ಸಿರಿಯಾಳನ ಗೆಲುವು

ಕಬ್ಬಿನ ಹಣಿದವನಾಡುವರಲ್ಲದೆ, ಕಾಯದ ಹಣಿದವನಾಡುವರೆ?
ಮೇಲೊಡ್ಡವಾಯಿತ್ತೆಂದು, ಲಿಂಗದೇವಾ.
ನೀನಿಕ್ಕಿದ ಜೂಜಿಂಗೆ ಹೊಯಿದು ಗೆದ್ದ ಸಿರಿಯಾಳ ! –ಬ.ವ.ದೀ 677

ಜೂಜಾಡುವಾಗ ಬೇರೆ ಬೇರೆ ವಸ್ತುಗಳನ್ನು ಪಣಕ್ಕಿಡುವರು ಕಬ್ಬನ್ನು ಪಣಕ್ಕಿಡಬಹುದೇ ವಿನಾ ತಮ್ಮ ಶರೀರವನ್ನು ಯಾರೂ ಜೂಜಿನಲ್ಲಿ ಪಣಕ್ಕಿಡರು. ಶಿವನು ಲೀಲಾಮೂರ್ತಿಯಾಗಿ ಜೂಜಾಡಲು ಬಂದು ಸಿರಿಯಾಳನ ಮಗನನ್ನೇ ಬೇಡಿದ. ಅಂಜದೆ ಅಳುಕದೆ ನೀಡಿದ ಸಿರಿಯಾಳ ಈ ಜೂಜಿನಲ್ಲಿ ಗೆದ್ದೇಬಿಟ್ಟ. (ಇಂಥ ಆದರ್ಶಗಳು ಹಿಂದಿನ ಕಾಲದಲ್ಲಿ ಬೆರಗನ್ನು ಉಂಟು ಮಾಡುವಂತಹವು ಆಗಿದ್ದರೆ ಈ ಕಾಲದಲ್ಲಿ ಜಿಗುಪ್ಸೆ ತರಿಸುತ್ತದೆ. ಹಿಂದಿನ ಕಾಲದಲ್ಲಿ ಕಾಪಾಲಿಕರು, ಅಘೋರಿಗಳು ನರಮಾಂಸ ಭಕ್ಷಕರಾಗಿ, ಊರೂರು ಅಲೆಯುತ್ತ ಬಂದು ಮೂಢಭಕ್ತರಲ್ಲಿ ವಿಲಕ್ಷಣ ಬೇಡಿಕೆ ಸಲ್ಲಿಸುತ್ತಿದ್ದರು. ಅವರು ಇಲ್ಲವೆನ್ನದೆ ನೀಡುತ್ತಿದ್ದರು. ಕೈಲಾಸಕ್ಕೆ ಹೋದರೋ ಬಿಟ್ಟರೋ ಅಂತೂ ಅತಿರೇಕದ ದಾನ ಕೊಡುತ್ತಿದ್ದರು. ಇಂದು ಇವೆಲ್ಲ ಅಸಹಜ, ಅನಾದರ್ಶ.)

679. ದೇಹದಾನ ಮಾಡಿದ ಸಿಂಧುಮರಾಳ

ಅರ್ಥಪ್ರಾಣಾಭಿಮಾನವ ಕೊಟ್ಟೆನೆಂಬರಲ್ಲದೆ
ಕೊಟ್ಟ ಭಕ್ತರನಾರನೂ ಕಂಡುದಿಲ್ಲ.
ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಇವೆಲ್ಲ ಹೊರಗಣ ಮಾತು!
ಲಿಂಗದೇವರಲ್ಲಿ ತನ್ನ ಕೊಟ್ಟ ಸಿಂಧುಮರಾಳ. –ಬ.ವ.ದೀ 678

'ನಮ್ಮ ಅರ್ಥ, ಪ್ರಾಣ, ಅಭಿಮಾನ ಎಲ್ಲವೂ ಜಂಗಮದ್ದು' ಎಂದು ಯಾಂತ್ರಿಕವಾಗಿ ಭಕ್ತರು ನುಡಿಯುತ್ತಾರೆ; ಆದರೆ ನಿಜವಾಗಿಯೂ ಕೊಡುವವರು ದುರ್ಲಭ. ದೇವರ ದಾಸಿಮಯ್ಯ ತಾನು ನೇಯ್ದ ವಸ್ತ್ರವನ್ನು ಕೊಟ್ಟನಲ್ಲದೆ ತನ್ನನ್ನು ಕೊಟ್ಟುಕೊಳ್ಳಲಿಲ್ಲ. ಸಿಂಧು ಬಲ್ಲಾಳ ತನ್ನ ಹೆಂಡತಿಯನ್ನು ಕೊಟ್ಟನಲ್ಲದೆ ತನ್ನನ್ನು ಕೊಟ್ಟುಕೊಳ್ಳಲಿಲ್ಲ. ಸಿರಿಯಾಳ ತನ್ನ ಮಗನನ್ನು ಬಲಿಕೊಟ್ಟನಲ್ಲದೆ ತನ್ನನ್ನು ಕೊಟ್ಟುಕೊಳ್ಳಲಿಲ್ಲ. ಕೊಟ್ಟವೆಲ್ಲ ಹೊರಗಿನ ವಸ್ತುಗಳೆ. ಆದರೆ

ನಿಜವಾಗಿಯೂ ತನ್ನನ್ನು ತಾನು ಕೊಟ್ಟುಕೊಂಡವನೆಂದರೆ ಸಿಂಧುಮರಾಳ. ಈತ ಸಿಂಧುದೇಶದ ರಾಜ. ತನ್ನ ತನುಮನಧನವೆಲ್ಲ ಜಂಗಮಾರ್ಪಿತ ಎಂಬುದು ಅವನ ಘೋಷಣೆ. ಇದನ್ನು ಕೇಳಿಸಿಕೊಂಡ ಓರ್ವ ಜಂಗಮ ಬಂದು ರಾಜ್ಯವನ್ನು ಬೇಡಿದ. ರಾಜ್ಯವನ್ನು ನೀಡಿದ ರಾಜನು ರಾಜ್ಯ ತ್ಯಾಗ ಮಾಡಿ ಹೊರಡುವಾಗ ಮತ್ತೋರ್ವ ಜಂಗಮನು ಬಂದು ರಾಜನ ಶರೀರದ ಬಲಭಾಗವನ್ನು ಬೇಡಿದ. ಬಲಭಾಗವನ್ನು ಕರಗಸದಿಂದ ಕೊಯ್ಯುವಾಗ ರಾಜನ ಎಡಗಣ್ಣಿನಿಂದ ನೀರು ಸುರಿಯಲಾರಂಭಿಸಿತು ಆಗ ಜಂಗಮನು ಅಳುತ್ತಾ ಕೊಡುವ ದಾನ ಬೇಡ ಎಂದು ನುಡಿದಾಗ 'ಬಲಭಾಗವಷ್ಟೆ ಶಿವಾರ್ಪಿತವಾಯಿತು. ಎಡಭಾಗ ವ್ಯರ್ಥವಾಗುತ್ತಿದೆ ಎಂದು ಕಣ್ಣಲ್ಲಿ ನೀರು ಬರುತ್ತಿದೆ.' ಎಂದು ರಾಜನು ಉತ್ತರಿಸಿದನು. ಶಿವನು ಮೆಚ್ಚಿ ಸಿಂಧುಮರಾಳನನ್ನು ಕೈಲಾಸಕ್ಕೊಯ್ದನು. ಹೀಗೆ ಸಿಂಧುಮರಾಳ ಜಂಗಮಕ್ಕೆ ತನ್ನ ದೇಹವನ್ನೇ ಸಮರ್ಪಿಸಿದನು.

680. ಶರಣರದು ಮಾತಲ್ಲ ಜ್ಯೋತಿರ್ಲಿಂಗ

ಒಂದು ಮಾತೆನ್ನಬಹುದೆ ಶಬ್ದ ಸಾರಾಯವನು ?
ಒಂದು ಮಾತೆನ್ನಬಹುದೆ ಶರಣ ಸಂಬಂಧವನು ? ಲಿಂಗದೇವರು
ನಂಬಿಗೆ ಒಲಿದು ಓ ಎಂದುದನೊಂದು ಮಾತೆನ್ನಬಹುದೆ ?
–ಬ.ವ.ದೀ 679

ಶರಣರ ಗೋಷ್ಠಿಯಲ್ಲಿ ನಡೆಯುವ ಚಿಂತನೆಯನ್ನು ಒಂದು ಮಾತು ಎಂದು ಉದಾಸೀನದಿಂದ ನುಡಿಯಬಹುದೆ? ಶರಣರು ಆಡುವ ಅಮೂಲ್ಯ ಮಾತುಗಳನ್ನು ಹಗುರವಾಗಿ ಭಾವಿಸಬಹುದೆ? ಸೌಂದರ ನಂಬಿ ಎಂಬ ಭಕ್ತನು ಕರೆದಾಗ ಶಿವನು ಓಗೊಟ್ಟ ಹೀಗೆ ಓಗೊಟ್ಟುದನ್ನು ಒಂದು ಮಾತು ಎಂದು ಉದಾಸೀನ ಮಾಡಲು ಬರುವುದೆ?

ಅಧ್ಯಾತ್ಮಿಕ ಜಗತ್ತಿನಲ್ಲಿ ಅನೇಕ ದಿವ್ಯಾನುಭವವಾಗಿ ಸಾಧಕರಿಗೆ ದರ್ಶನ ಪ್ರಾಪ್ತಿಯಾಗುತ್ತದೆ ಮತ್ತು ಅನೇಕ ಆದೇಶಗಳು, ವಾಣಿ ಪ್ರಾಪ್ತಿಯಾಗುತ್ತದೆ. ಅಂಥ ಅನುಭವಗಳು ಸಾಧಕರ ಜೀವನದಲ್ಲಿ ಅಪೂರ್ವ ಬದಲಾವಣೆ ತರುತ್ತವೆ. ಅಂಥ ದೇವವಾಣಿಯನ್ನು ಒಂದು ಮಾತು ಎಂದು ಹಗುರವಾಗಿ ಭಾವಿಸಲು ಬರುವುದೆ?

681. ಭಕ್ತರಲ್ಲಿ ಭೇದವಿಲ್ಲ

ಭಕ್ತರ ಸಮರ್ಥರು, ಅಸಮರ್ಥರೆಂದೆನಲುಂಟೆ?
ಚನ್ನನೆತ್ತ, ಚೋಳನೆತ್ತ?
ಚನ್ನನೊಡನುಂಡ ಶಿವನು, ಆಹಾ ಅಯ್ಯಾ,
ಚನ್ನ ಚೋಳನ ಮನೆಯ ಕಂಪಣಿಗನಯ್ಯಾ !
ಕೂಡಲಸಂಗಮದೇವ.ಭಕ್ತಿಲಂಪಟನಯ್ಯಾ! –ಬ.ವ.ದೀ 680

ಭಕ್ತರಲ್ಲಿ ಸಮರ್ಥರು, ಅಸಮರ್ಥರು, ಶ್ರೇಷ್ಠರು ಶ್ರೇಷ್ಠರಲ್ಲ ಎಂದು ಭೇದ ಮಾಡಲು ಬರುವುದಿಲ್ಲ. ಮಾದಾರ ಚನ್ನನು ಅತ್ಯಂತ ಕೆಳವರ್ಗದಲ್ಲಿ ಹುಟ್ಟಿದವನು. ರಾಜನ ಅರಮನೆಯ ಲಾಯಕ್ಕೆ ಹುಲ್ಲು ತಂದು ಹಾಕುವ ಕಂಪಣಿಗ. ಚೋಳನು ಇಡೀ ದೇಶದ ಅಧಿಪತಿ. ಆದರೆ ಶಿವನು

ರಾಜನ ಮನೆಯ ಭಕ್ಷ್ಯ ಭೋಜ್ಯಗಳನ್ನು ಕಡೆಗಣಿಸಿ ಚನ್ನನ ಮನೆಯ ಅಂಬಲಿ ಕುಡಿಯಲು ಬಂದ. ಹೀಗಾಗಿ ರಾಜನಿಗಿಂತ ಚನ್ನನ್ನೇ ಸಮರ್ಥ ಎನ್ನಬಹುದು ಆದರೆ ತನ್ನ ಮನೆಯ ಭಕ್ಷ್ಯಭೋಜ್ಯ ನಿರಾಕರಿಸಿ ಬಡಭಕ್ತ ಚನ್ನನ ಮನೆಯ ಅಂಬಲಿಯನ್ನು ಶಿವನು ಉಂಡ ಸಂಗತಿ ತಿಳಿದು ಚನ್ನಯ್ಯನನ್ನು ಮನ ತುಂಬಿ ಗೌರವಿಸಿದ ಚೋಳರಾಜ, ದೇವರು ಭಕ್ತಿಲಂಪಟ; ಶ್ರೀಮಂತ ಭಕ್ತರು ಬಡಭಕ್ತರು ಎಂದು ಭೇದ ಮಾಡುವುದಿಲ್ಲ ಎಂಬುದನ್ನು ಜಗತ್ತಿಗೆ ತೋರಿಸಲು ಮತ್ತು ಚನ್ನಯ್ಯನಂತಹ ಭಕ್ತನಿದ್ದಾನೆ ಎಂಬುದನ್ನು ಪ್ರದರ್ಶಿಸಲು ಅವನ ಮನೆಯಲ್ಲಿ ಉಂಡ. ಹೀಗೆ ದೇವರು ಭಕ್ತಿಲಂಪಟನು.

682. ಓಹಿಲಯ್ಯನ ಭಕ್ತಿ

ನಿಸ್ಸೀಮ ಗುಗ್ಗಳವನಿಕ್ಕಿದನೊಬ್ಬ ಶರಣ
ಉಘೇ ಚಾಂಗು ಭಲಾ ಎಂಬ ಹೊಗೆ ಗಗನವ ತೀವೆ,
ಓಹಿಲನ ಮೆರೆದ ಸೌರಾಷ್ಟ್ರ ಮಂಡಲದಲ್ಲಿ,
ಕೂಡಲ ಸಂಗಮದೇವ ಭಕ್ತವತ್ಸಲನಾಗಿ. –ಬ.ವ.ದೀ 681

ಗುಜರಾತ್ ದೇಶದ ವಿಳಾಸವತಿ ಎಂಬ ರಾಜ್ಯವನ್ನು ಆಳುತ್ತಿದ್ದ ನಿಃಕುಂಬರಾಜನಿಗೆ ಶಿವಕರುಣೆಯಿಂದ ಓಹಿಲಯ್ಯನೆಂಬ ಮಗ ಹುಟ್ಟಿದನು. ಅವನು ಅಲ್ಪಾಯುಷಿ ಎಂದು ತಿಳಿದು ಮರಣವನ್ನು ಗೆಲ್ಲಲು ರಾಜ್ಯವನ್ನು ತೊರೆದು ಸೌರಾಷ್ಟ್ರ ಸೋಮೇಶ್ವರ ಲಿಂಗದ ಉಪಾಸನೆಯನ್ನು ಕೈಗೊಂಡನು. ಜನರಿಂದ ಸಂಗ್ರಹಿಸಿದ ಗುಗ್ಗುಳವನ್ನು ಬಳಸದೆ ತಾನೇ ಮಲಯ ಪರ್ವತಕ್ಕೆ ಕಾಲ್ನಡಿಗೆಯಿಂದ ಹೋಗಿ ಗಂಧವನ್ನು ತಂದು ದೇವರಿಗೆ ಧೂಪದ ಸೇವೆಯನ್ನು ಮಾಡುತ್ತಿದ್ದನು. ಈ ನಿಯಮವನ್ನು 24 ವರ್ಷಗಳ ಕಾಲ ಪಾಲಿಸಿ ಶಿವನಿಂದ ಗಣಪದವಿಯನ್ನು ಪಡೆದನು.

ಹೀಗೆ ಅಪ್ರತಿಮವಾದ ಗುಗ್ಗುಳವನ್ನು ಸೋಮೇಶ್ವರನಿಗೆ ಹಾಕಿ ಓಹಿಲಯ್ಯನು ಉಘೇಚಾಂಗು ಭಲಾ ಎಂದು ಜಯಘೋಷ ಮಾಡುತ್ತಿದ್ದನು. ಭಕ್ತ ವತ್ಸಲನಾದ ಶಿವನು ಓಹಿಲಯ್ಯನನ್ನು ಅಮರನನ್ನಾಗಿ ಮಾಡಿ ಮೆರೆಸಿದನು. ಓಹಿಲಯ್ಯನು ದೀರ್ಘಾಯುಷಿಯಾಗಿ ಬಾಳಿದನು.

683. ಎಲ್ಲವೂ ಲಿಂಗಾಧೀನ

ಲಿಂಗವಶದಿಂದ ಬಂದ ನಡೆಗಳು, ಲಿಂಗವಶದಿಂದ ಬಂದ ನುಡಿಗಳು
ಲಿಂಗವಂತರು ತಾವು ಅಂಜಲೇಕೆ,
ಲಿಂಗವಿರಿಸಿದಂತಿಪ್ಪುದಲ್ಲದೆ?
ಲಿಂಗದೇವ ಭಕ್ತರಭಿಮಾನ ತನ್ನದೆಂಬನಾಗಿ ! –ಬ.ವ.ದೀ 682

ಪರಮಾತ್ಮನಿಗೆ ಸರ್ವಾರ್ಪಣೆ ಮಾಡಿದ ಸಾಧಕರ ನಡೆನುಡಿ ಎಲ್ಲವೂ ಲಿಂಗವಶದಲ್ಲಿರುತ್ತವೆ ಲಿಂಗದೇವನ ಪ್ರೇರಣೆಯೊಡನೆ ಅವರು ನಡೆಯುತ್ತಾರೆ, ನುಡಿಯುತ್ತಾರೆ. ಜನ ಸಾಮಾನ್ಯರು ಅದನ್ನು ಅರ್ಥಮಾಡಿಕೊಳ್ಳದೆ ವಿರೋಧಿಸುತ್ತಾರೆ. ಟೀಕಿಸುತ್ತಾರೆ. ಹಾಗೆ ವಿರೋಧ ವ್ಯಕ್ತವಾದಾಗ ನಿಜ ಲಿಂಗಭಕ್ತರು ಅಧೀರರಾಗಬಾರದು. ಲಿಂಗದೇವನು ಇರಿಸಿದಂತೆ ತಾವು ಇದ್ದೇವೆ ಎಂದು

ನಿಶ್ಚಿಂತವಾಗಿ ಇರಬೇಕು. ಏಕೆಂದರೆ ಭಕ್ತರ ಅಭಿಮಾನವನ್ನು ಕಾಯುವುದು ತನ್ನ ಹೊಣೆಗಾರಿಕೆ ಎಂದು ದೇವರು ಭಾವಿಸುತ್ತಾನೆ.

ಈ ವಚನವನ್ನು ನಮ್ಮ ಜೀವನದ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು. ಒಂದು ಹಂತದವರೆಗೆ ನಾನು ನಾನಾಗಿದ್ದೆ. ದೀಕ್ಷಾ ನಂತರ ದೇವರೇ (ಸಚ್ಚಿದಾನಂದ) ನನ್ನ ಸರ್ವಾಂಗದಲ್ಲಿ ತುಂಬಿಕೊಂಡ ಸನ್ಯಾಸ ಜೀವನದ ಪ್ರೇರಣೆ ಬಂದಾಗ ಹೆತ್ತವರಿಂದ, ಬಂಧು ಬಾಂಧವರಿಂದ, ಸುತ್ತಣವರಿಂದ ವಿರೋಧ ಬಂದಿತು. ಅದಕ್ಕೆ ಬೆಲೆಕೊಡದೆ ದೇವ ಪ್ರೇರಣೆಯಿಂದ ಮುನ್ನಡೆದೆ. ಇನ್ನೂ ಅನೇಕ ಪ್ರಸಂಗಗಳನ್ನು ಎದುರಿಸಬೇಕಾಯಿತು. ಆಟವಾಡುವಾಗ ಮಗುವನ್ನು ಮೇಲಕ್ಕೆಸೆದು ಅದು ಗಾಬರಿಯಿಂದ ಚೀರುವಾಗ ಮತ್ತೆ ತಂದೆ ಕೈಚಾಚಿ ಹಿಡಿಯುವಂತೆ ಪರಮಾತ್ಮನು ರಕ್ಷಿಸಿದ.

ನಂತರ ಎದುರಾದುದು, ಲಿಂಗದೇವ ವಚನಾಂಕಿತ ಪ್ರಸಂಗ. ಗುರು ಬಸವಣ್ಣನವರ ವಚನಗಳಿಗೆ ತಾತ್ತ್ವಿಕ, ಸೈದ್ಧಾಂತಿಕ ಶುದ್ಧಿಯನ್ನು ಕಲ್ಪಿಸಲು ಅವನ ಪ್ರೇರಣೆಯಂತೆಯೇ ಕೆಲವು ವಚನಗಳಲ್ಲಿ ಕೂಡಲ ಸಂಗಮದೇವ ಬದಲಿಗೆ ಲಿಂಗದೇವ ಬಳಸಿದೆವು. ಪ್ರತಿಯೊಂದು ಧರ್ಮದಲ್ಲೂ ದೇವರಿಗೆ ವಿಶೇಷವಾದ ಹೆಸರಿರುವಂತೆ ಲಿಂಗಾಯತ ಧರ್ಮದಲ್ಲೂ ಇರಲೇಬೇಕು ಎಂಬ ಊಹೆಯೊಡನೆ ನಡೆಸಿದ ಸಂಶೋಧನೆ ಲಿಂಗದೇವದಲ್ಲಿ ಪರ್ಯವಸಾನಗೊಂಡಿತು. ಗುರು ಬಸವಣ್ಣನವರ ವಚನಗಳ ಗಣೆಯಲ್ಲೇ ಸಿಕ್ಕ ಅಮೂಲ್ಯ ವಜ್ರ 'ಲಿಂಗದೇವ'! ಆದರೆ ಅದನ್ನು ಅರಿಯಲಾರದವರು, ಒಳಗೆ ಅರಿತಿದ್ದರೂ ನಮ್ಮನ್ನು ವಿರೋಧಿಸಬೇಕೆನ್ನುವವರು, ನಾನಾ ಕಾರಣಗಳಿಗಾಗಿ ದ್ವೇಷಿಸುವವರು ಎಲ್ಲರೂ ಒಟ್ಟು ಸೇರಿ ಭಾರಿ ಗದ್ದಲವನ್ನು ಎಬ್ಬಿಸಿದರು. ನಾಲ್ಕಾರು ಕೋರ್ಟ್‌ಗಳಲ್ಲಿ ಸಿವಿಲ್, ಕ್ರಿಮಿನಲ್ ಮೊಕದ್ದಮೆ ಹೂಡಿದರು. (ಎಲ್ಲವೂ ವಜಾ ಆಗುತ್ತ ಬಂದು ಗುಲಬರ್ಗಾದಲ್ಲಿ ಹಾಕಿದ್ದ ಕ್ರಿಮಿನಲ್ ಮೊಕದ್ದಮೆ ಕಳೆದ ವಾರವಷ್ಟೆ ವಜಾ ಆಯಿತು) ನಮ್ಮ ಶಿಷ್ಯರುಗಳ ಪ್ರವಚನಗಳಲ್ಲಿ ಆತಂಕ ಉಂಟು ಮಾಡಿದರು.

ಆದರೆ ನನ್ನ ಮತ್ತು ನಮ್ಮ ಸಂಸ್ಥೆಯ ಜಂಗಮ ಮೂರ್ತಿಗಳಲ್ಲಿ ಲಿಂಗದೇವನ ಶ್ರದ್ಧೆ ಅಚಲವಾಗಿತ್ತು. ಈಗ ಕವಿದ ಕಾರ್ಮೋಡ ಸರಿದಿದೆ. ಹೆಚ್ಚು ಜನರು ಅರಿಯತೊಡಗಿದ್ದಾರೆ. ಸಂಶೋಧನೆ ಯಾವಾಗಲೂ ಹಳೆಯದಕ್ಕಿಂತಲೂ ಭಿನ್ನವಾಗಿರುತ್ತದೆ. ಸಂಶೋಧನೆ ಎಂದರೆ ಸತ್ಯ ಶೋಧನೆ. ನಮಗೆ ಮಾತ್ರ ಎಂತಹ ಸಂಕಷ್ಟದ ಕಾಲದಲ್ಲೂ ಮನವು ವಿಚಲಿತಗೊಳ್ಳಲಿಲ್ಲ ಏಕೆಂದರೆ ನಾನು ಮಾಡಿದ್ದು "ಲಿಂಗವಶದಿಂದ ಬಂದ ನಡೆ, ಲಿಂಗ ವಶದಿಂದ ಬಂದ ನುಡಿ". ಲಿಂಗದೇವನ ಮತ್ತು ಗುರು ಬಸವಣ್ಣನವರ ಪ್ರೇರಣೆಯೊಡನೆಯೇ ಇದು ಹೊರಹೊಮ್ಮಿದೆ ಎಂದಾಗ ಅಂಜಲೇಕೆ ? ಎಂದು ಧೈರ್ಯವಾಗಿದ್ದೆವು. ಕಡೆಗೂ "ಭಕ್ತರಭಿಮಾನ ತನ್ನದೆಂದು" ಲಿಂಗದೇವನು ನಮ್ಮನ್ನು ಕಾಯ್ದು ತನ್ನನ್ನು ಪ್ರಕಾಶಿಸಿಕೊಂಡನು.

384. ದೇವನ ಪರೀಕ್ಷೆ

ಭಕ್ತನಾಗಿ ತನ್ನ ಹಿಡಿದಹೆನೆಂದು ಹೋದಡೆ
ನುಗು ಮಾಡುವ, ನುಸಿಯ ಮಾಡುವ
ಮಣ್ಣ ಮಾಡುವ, ಮಸಿಯ ಮಾಡುವ

ಕೂಡಲ ಸಂಗಮದೇವರ ನೆರೆ ನಂಬಿದನಾದಡೆ
ಕಡೆಗೆ ತನ್ನಂತೆ ಮಾಡುವ –ಬವದೀ 683

ಆದರ್ಶ ಮಾರ್ಗ ಹಿಡಿಯುವವರಿಗೆ ಕಷ್ಟಗಳು ಬಹಳ. ದೇವರ ಮಾರ್ಗವನ್ನು ತುಳಿಯ ಬೇಕೆನ್ನುವವರಿಗೆ ಬಗೆಬಗೆಯಾಗಿ ಪರೀಕ್ಷೆಗಳು ಎದುರಾಗುವುವು. ದೇವರು ಭಕ್ತನನ್ನು ನುಗ್ಗು ಮಾಡುವ, ನುಸಿಯ ಮಾಡುವ ಮಣ್ಣ ಮಾಡುವ, ಮಸಿಯ ಮಾಡುವ. ಏಕೆಂದರೆ ಭಕ್ತ ತುಳಿಯುವ ಹಾದಿ ಹೂವಿನದಲ್ಲ ಮುಳ್ಳು ಕಲ್ಲಿನದು. ಆದರೆ ಸಾಧಕ ಹಿಡಿದ ಛಲವನ್ನು ಬಿಡದೆ ಇದ್ದರೆ ದೇವನು ಕಡೆಗೆ ತನ್ನಂತೆ ಮಾಡುವ. ಇದು ಒಂದು ರೀತಿ ದೇವನು ಆಡುವ ಕಣ್ಣುಮುಚ್ಚಾಲೆಯಾಟ.

ಸಂಪ್ರದಾಯ ಮಠಾಧಿಕಾರಿಗಳಾಗುವವರಿಗೆ ಕೆಲವು ಕಷ್ಟಗಳು ಎದುರಾಗುವುದಿಲ್ಲ. ದೊಡ್ಡ ಆಸ್ತಿ ಇರುವ ಮಠಕ್ಕೆ ಮಗ ಅಧಿಕಾರಿಯಾಗುವನೆಂದು ತಾಯಿತಂದೆ ಬಂಧುಬಾಂಧವರಿಗೆ ಖುಷಿ. ಸಾಧಕರಾಗಿ ಸನ್ಯಾಸಿಗಳಾಗುವವರಿಗೆ ಹಾಗಲ್ಲ ಮೊದಲು ಮನೆಯವರಿಂದಲೇ ವಿರೋಧ. ನಂತರ ಸಮಾಜದಿಂದ. ಸಂಪ್ರದಾಯ ಮಠದ ಉತ್ತರಾಧಿಕಾರಿಗಳಾಗುವವರಿಗೆ ಸಿಗುವ ಸಹಜ ಗೌರವ, ಪುರಸ್ಕಾರ ಸ್ಥಾನಮಾನ ಸಾಧಕ ಜೀವಿಗಳಿಗೆ ಸಿಗದು. ಸಂಕಷ್ಟ ವಿರೋಧಗಳ ಕುಲುಮೆಯಲ್ಲಿ ಬೆಂದು ಅವರು ಹೊರಬರಬೇಕು. ಆದರೆ ಅಂತಿಮವಾಗಿ ಸ್ವಯಂಪ್ರೇರಿತ ಸಾಧಕರಿಂದಲೇ ಹೆಚ್ಚಿನ ಕೆಲಸಗಳು ಆಗುವವು ಎಂಬುದು ಇತಿಹಾಸ ಕಂಡ ಸತ್ಯ. ಏಕೆಂದರೆ ದೇವನೊಲಿಮೆ ಅವರಿಗೆ ಸಿಗುವ ಅಮೂಲ್ಯ ಸಂಪತ್ತು.

385. ದೇವನ ಪರೀಕ್ಷೆ

ಅರೆವನಯ್ಯ ಸಣ್ಣವಹನ್ನೆಕ್ಕ
ಒರೆವನಯ್ಯಾ ಬಣ್ಣಗಾಂಬನ್ನಕ್ಕ
ಅರೆದಡೆ ಸಣ್ಣವಾಗಿ, ಒರೆದಡೆ ಬಣ್ಣವಾದಡೆ
ಕೂಡಲಸಂಗಮದೇವನೊಲಿದು ಸಲಹುವನು. –ಬ.ವ.ದೀ 684

ಸ್ವಯಂ ಪ್ರೇರಣೆಯ ಸಾಧಕರಿಗೆ ದೇವರ ಪರೀಕ್ಷೆ ಬಹಳ. ಸಣ್ಣವಾಗುವವರೆಗೆ ಒಂದು ವಸ್ತುವನ್ನು ಅರೆವಂತೆ ದೇವನು ಕಾಡುವನು. ಒಳಗೆ ಮಣ್ಣು ಹೊರಗೆ ಬಣ್ಣ ಇರುವ ಗೊಂಬೆ ಬಣ್ಣ ಹೋಗುತ್ತಲೇ ಮಣ್ಣುಕಾಣುವಂತಾಗುತ್ತದೆ. ಹಾಗೆಯೇ ಅಂತರಂಗದಲ್ಲಿ ದೃಢತೆ ಇಲ್ಲದ ವ್ಯಕ್ತಿ ದೇವನ ಪರೀಕ್ಷೆಯಲ್ಲಿ ಸೋಲುತ್ತಾನೆ. ಒಳಹೊರಗೆ ಚಿನ್ನವೇ ಇದ್ದರೆ ಒರೆದಷ್ಟು ಚಿನ್ನವೇ ಇರುತ್ತದೆ ಎಂತೋ ಹಾಗೆ ಪರೀಕ್ಷಿಸಿದಷ್ಟು ಸ್ಥೈರ್ಯ ಕುಂದದೆ ಇರುವನು. ಅಂಥ ದೃಢ ಮನಸ್ಸಿನ ಸಾಧಕನಿಗೆ ದೇವನು ಒಲಿಯುವನು.

686. ಕಕ್ಕುಲತೆ ಬೇಡ

ಅಂಜಿದಡಾಗದು ಅಳುಕಿದಡಾಗದು, ವಜ್ರಪಂಜರದೊಳಗಿದ್ದಡಾಗದು.
ತಪ್ಪದುವೋ! ಲಲಾಟಲಿಖಿತ
ಕಕ್ಕುಲತೆಗೆ ಬಂದಡಾಗದು, ನೋಡಾ,

ಧೃತಿಗೆಟ್ಟು ಮನ ಧಾತುಗೆಟ್ಟಡೆ ಅಪ್ಪುದು ತಪ್ಪದು, ಲಿಂಗದೇವಾ.
-ಬ.ವ.ದೀ 685

ಸಮಾಜ ಸುಧಾರಣೆಯ ಕೆಲಸ ಕೈಗೊಂಡವರಿಗೆ ತೊಂದರೆಗಳು ಬಹಳ, ವಿರೋಧಗಳು ವಿಪುಲ. ಇದು ಗೊತ್ತಿದ್ದೇ ಸಂಪ್ರದಾಯವನ್ನು ವ್ಯವಸ್ಥೆಯನ್ನು ಪ್ರತಿಭಟಿಸಬೇಕು. ಸತ್ಯವಾದಿಯಾಗಿ ಸಂಪ್ರದಾಯದ ವಿರುದ್ಧ ಪ್ರತಿಭಟಿಸಲು ನಿಂತವರು ಬರುವ ವಿರೋಧಗಳಿಗಾಗಿ ಅಂಜಿದರಾಗದು, ಅಳುಕಿದರಾಗದು, ವಜ್ರ ಪಂಜರವನ್ನು ಹುಡುಕಿಕೊಂಡು ಹೋದರೆ ಆಗದು. ಹಣೆಯ ಬರಹದಲ್ಲಿ ಬರೆದಂತೆ ಆಗುತ್ತದೆ. ವಿನಾಕಾರಣ ಹೊಯ್ದಾಡಿದರಾಗದು. ಧೃತಿಗೆಡುವುದರಿಂದ ಮನಸ್ಸು ಧೈರ್ಯವನ್ನು ಕಳೆದುಕೊಳ್ಳುತ್ತದೆ. ಸಾಮಾನ್ಯವಾಗಿ ಮನುಷ್ಯನ ದೌರ್ಬಲ್ಯವೆಂದರೆ ಮುಂದೆ ಆಗಬಹುದೆಂದು ಏನೇನನ್ನೋ ಊಹಿಸಿಕೊಳ್ಳುವುದು. ಕೆಲವೊಮ್ಮೆ ಊಹೆ ಸತ್ಯಕ್ಕಿಂತಲೂ ಭಯಂಕರವಾಗಿರುತ್ತದೆ. ಊಹಿಸಿದ್ದಕ್ಕಿಂತಲೂ ಸೌಮ್ಯವಾಗಿ ಸಂಕಷ್ಟ ಬರಬಹುದು. ಆದರೆ ಊಹೆಯಿಂದ ವ್ಯಕ್ತಿ ಘಾಸಿಯಾಗುತ್ತಾನೆ. ಧೃತಿಗೆಟ್ಟು ಮನಸ್ಸು ಸ್ಥೈರ್ಯವನ್ನು ಕಳೆದುಕೊಂಡರೆ ಆಗುವುದೇನೂ ತಪ್ಪುವುದಿಲ್ಲ. ಆದ್ದರಿಂದ ಪರಿಸ್ಥಿತಿಯನ್ನು ಚಿತ್ತ ಸಮತೆಯಿಂದ ಎದುರಿಸಬೇಕು.

687. ಕರ್ಮಫಲ ಭೋಗ

ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದಡೆ
ತಪ್ಪದು ನೋಡಯ್ಯಾ.
ಎನಗಿನ್ನೆಂತೋ, ಎನಗಿನ್ನೆಂತೋ ಎನಗಿನ್ನೆಂತೋ ಎಂದೆನಬೇಡ
'ನಾ ಭುಕ್ತಂ ಕ್ಷೀಯತೆ ಕರ್ಮ' ಎಂಬ ಶ್ರುತಿ ತಪ್ಪದು, ಲಿಂಗದೇವಾ
-ಬ.ವ.ದೀ 686

ಮಾನವನಾಗಿ ಹುಟ್ಟಿದ ಬಳಿಕ ತನ್ನ ಪಾಲಿಗೆ ಬಂದ ಭೋಗಗಳನ್ನು ತಪ್ಪಿಸಿಕೊಳ್ಳುವೆನೆಂದರೆ ಅದು ಸಾಧ್ಯವಿಲ್ಲ. ಹಿಂದಿನ ಜನ್ಮದ ಕರ್ಮಗಳ ಫಲ ಭೋಗಗಳನ್ನು ಅನುಭವಿಸಲೇಬೇಕು. ಆದ್ದರಿಂದ ಎನಗೆ ಏನಾಗುವುದೋ, ಏನಾಗುವುದೋ ಎಂಬ ಹೊಯ್ದಾಟಬೇಡ. 'ಅನುಭವಿಸದಲ್ಲದೆ ಕರ್ಮವು ಸವೆಯದು' ಎಂಬ ಶ್ರುತಿವಾಕ್ಯ ತಪ್ಪದು.

ಹಿಂದಿನ ಜನ್ಮದ ಕರ್ಮಫಲ ಕಟ್ಟಿಕೊಂಡ ಬುತ್ತಿಯಂತೆ. ತನ್ನ ಬುತ್ತಿಯನ್ನು ತಾನೇ ಉಣ್ಣಬೇಕು. ಉಂಡಲ್ಲದೆ ಅದು ಸವೆಯದು.

688. ಲಿಂಗದೇವನ ಆಳು.

ಆಯುಷ್ಯ ತೀರದಲ್ಲದೆ ಮರಣವಿಲ್ಲ.
ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ
ಅಂಜಲದೇಕೋ ಲೋಕ ವಿಗುರ್ಭಣೆಗೆ ?
ಅಂಜಲದೇಕೋ, ಲಿಂಗದೇವಾ ನಿಮ್ಮಾಳಾಗಿ. -ಬ.ವ.ದೀ 687

ಈ ವಚನದಲ್ಲಿ ಬರುವ ಮುಖ್ಯ ಸಂಗತಿ 'ಲೋಕ ವಿಗುರ್ಭಣೆ'. ಒಂದು ಅಂಥ ಸಂಪ್ರದಾಯದ ವಿರುದ್ಧ ಜಡಗಟ್ಟಿದ ವ್ಯವಸ್ಥೆಯ ವಿರುದ್ಧ ಸಮಾಜ ಸುಧಾರಕರು ಹೋರಾಟಕ್ಕೆ

ನಿಂತಾಗ ಸಂಪ್ರದಾಯ ನಿಷ್ಠರು, ಮತಾಂಧರು ತೀವ್ರವಾಗಿ ವಿರೋಧಿಸುವರು. ಹಲ್ಲೆ ಮಾಡಲು ಮುಂದಾಗುವರು, ಪ್ರಾಣ ತೆಗೆಯಲೂ ಹೇಸರು. ಅದಕ್ಕಾಗಿ ಗುರು ಬಸವಣ್ಣನವರು ತಮಗೆ ತಾವೇ ಹೇಳಿಕೊಳ್ಳುತ್ತ ಲೋಕಕ್ಕೆ ಬೋಧೆ ಮಾಡುವರು, "ಆಯುಷ್ಯ ತೀರಿದ್ದರೆ ಮಾತ್ರ ಮರಣ ಬರುವುದು. ಆಯುಷ್ಯ ತೀರಿಲ್ಲದಿದ್ದರೆ ಯಾರು ಕೊಲ್ಲಬೇಕೆಂದರೂ ಸಾಧ್ಯವಾಗದು. ಕೊಟ್ಟ ಭಾಷೆ ತಪ್ಪಿದಾಗ ಮಾತ್ರ ದಾರಿದ್ರ್ಯ ಬರುತ್ತದೆ. ಆದ್ದರಿಂದ ಲಿಂಗದೇವನಿಗೆ ಆಳಾದವನು, ದಾಸನಾದವನು ಲೋಕದ ವಿರೋಧಕ್ಕಾಗಿ ಅಂಜಬಾರದು."

689. ಪ್ರೀತಿಯಲ್ಲಿ ನಿಷ್ಠೆ

ಮನಕ್ಕೆ ಮನ ಒಂದಾಗಿ, ಧನಕ್ಕೆ ಧನ ಒಂದಾಗಿ,
ನಚ್ಚಿದ ಮಚ್ಚು ಅಚ್ಚೊತ್ತಿದಂತಿರಬೇಕು.
ಪ್ರಾಣಕ್ಕೆ ಪ್ರಾಣ ಒಂದಾಗಿ ಶುಭಸೂಚನೆ ಒಂದಾಗಿರದ
ನಚ್ಚು ಮಚ್ಚು ಪಾರವೈದುವುದೆ ?
ಶಿರ ಹರಿದಡೇನು, ಕರುಳುಕುಪ್ಪಳಿಸಿದಡೇನು ?
ಇಂತಪ್ಪ ಸಮಸ್ತ ವಸ್ತುವೆಲ್ಲವೂ ಹೋದಡೇನು ?
ಚಿತ್ತ ಮನ ಬುದ್ಧಿ ಒಂದಾದ ಮಚ್ಚು ಬಿಚ್ಚಿ ಬೇರಾಗದಿದ್ದಡೆ?
ಮೆಚ್ಚುವ ನಮ್ಮ ಲಿಂಗದೇವ. -ಬ.ವ.ದೀ 688

ಸಂಬಂಧಗಳು ವ್ಯಕ್ತಿಗಳ ಮಧ್ಯೆ ಹುಟ್ಟುತ್ತವೆ, ಬೆಳೆಯುತ್ತವೆ. ಪತಿ-ಪತ್ನಿಯರಲ್ಲಿ, ಗುರು-ಶಿಷ್ಯರಲ್ಲಿ, ಶರಣರಲ್ಲಿ, ಸ್ನೇಹಿತರಲ್ಲಿ- ಹೀಗೆ ಸಂಬಂಧಗಳು ಸೃಷ್ಟಿಯಾಗಬಹುದು. ಆಗ ಅವರ ಪರಸ್ಪರರ ಪ್ರೀತಿ-ವಿಶ್ವಾಸ, ಹೇಗಿರಬೇಕು ಎಂಬುದು ಈ ವಚನದಲ್ಲಿ ವ್ಯಕ್ತವಾಗಿದೆ. ಮನಸ್ಸುಗಳು ಕೂಡಿರಬೇಕು, ಸಮಾನ ಆದರ್ಶ ಏಕರೂಪದ ಚಿಂತನೆಯಿಂದ ಕೂಡಿರಬೇಕು. ಸಂಪತ್ತು ಯಾರಲ್ಲಿದ್ದರೂ ಅದು ಉಭಯತರಿಗೂ ಸಂಬಂಧಿಸಿದ್ದು ಎಂಬ ಭಾವವಿರಬೇಕು. ನಂಬಿರುವ ವಿಶ್ವಾಸ ಅಚ್ಚೊತ್ತಿದಂತಿರಬೇಕು. ಪ್ರಸಂಗ ಬಂದರೆ ಪ್ರಾಣವನ್ನು ಕೊಡಲೂ ಸಿದ್ಧರಾಗಿರಬೇಕು. ತೋರಿಕೆಯ ವಿಶ್ವಾಸವಿದ್ದು ಯಾವ ತ್ಯಾಗಕ್ಕೂ ಸಿದ್ಧವಿಲ್ಲದ ಸಂಬಂಧ, ನಚ್ಚು ಅಂದರೆ ನಂಬಿಕೆ, ಮಚ್ಚು ಅಂದರೆ ಪ್ರೀತಿ ದಡವನ್ನು ಸೇರುವುದೇ ಇಲ್ಲ. ಶಿರ ಹರಿದರೇನು, ಕರುಳು ಕುಪ್ಪಳಿಸಿದರೇನು ಸಮಸ್ತ ವಸ್ತುವೆಲ್ಲವೂ ಹೋದಡೇನು ಚಿತ್ತಮನ ಬುದ್ಧಿಗಳು ಒಂದಾದ ಪ್ರೀತಿ ಬಿಚ್ಚಿ ಬೇರಾಗದಿದ್ದಡೆ ಲಿಂಗದೇವನು ಅಂಥ ಸಂಬಂಧವನ್ನು ಮೆಚ್ಚುವನು.

2.ಮಾಹೇಶ್ವರನ ಮಾಹೇಶ್ವರ ಸ್ಥಲ

(ಅತ್ಯಂತ ಕಠೋರವಾದ ನಿಷ್ಠೆಯ ಸ್ಥಲ ಇದು)

690. ತತ್ತ್ವನಿಷ್ಠೆ

ಎನಿಸೆನಿಸೆಂದಡೆ ನಾ ಧೃತಿಗೆಡೆನಯ್ಯಾ;
ಎಲುದೋರಿದಡೆ, ನರ ಹರಿದಡೆ, ಕರುಳು ಕುಪ್ಪಳಿಸಿದಡೆ
ನಾ ಧೃತಿಗೆಡೆನಯ್ಯಾ.

ಇಂತಪ್ಪ ಸಮಸ್ತ ವಸ್ತುವೆಲ್ಲವೂ ಹೋದಡೇನು?
ಚಿತ್ತ ಮನ ಬುದ್ಧಿ ಒಂದಾದ ಮಚ್ಚು ಬಿಚ್ಚಿ ಬೇರಾಗದಿದ್ದಡೆ
ಮೆಚ್ಚುವ ನಮ್ಮ ಲಿಂಗದೇವ. – ಬ.ವ.ದೀ 689

ಏನೇ ಆದರೂ ನಾನು ಧೈರ್ಯಗೆಡುವುದಿಲ್ಲ. ಎಲುಬು ಕಾಣುವಂತೆ ಶರೀರ ಛಿದ್ರವಾದರೂ, ನರವು ಕಿತ್ತು ಹೋದರೂ, ಕರುಳುಗಳು ಕಳಚಿ ಮುದ್ದೆಯಾಗಿ ಬಿದ್ದರೂ ನಾನು ಧೈರ್ಯಗೆಡುವುದಿಲ್ಲ. ಶಿರವು ಕತ್ತರಿಸಿ ಹೋಗಿ ಮುಂಡವು ನೆಲಕ್ಕೆ ಬಿದ್ದರೂ ನನ್ನ ನಾಲಿಗೆ 'ಲಿಂಗದೇವಾ' ಶರಣು ಎನ್ನುತ್ತಿದ್ದಿತು. ಅಂಥ ನಿಷ್ಠೆ ನನ್ನದು.

691. ಏಕದೇವನಿಷ್ಠೆ

ಒಣಗಿಸಿ ಎನ್ನ ಘಣಘಣಲನೆ ಮಾಡಿದಡೆಯೂ
ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ, ಮಾಣೆ.
ಶರಣೆಂಬುದ ಮಾಣೆ, ಮಾಣೆ.
ಲಿಂಗದೇವಯ್ಯಾ, ಎನ್ನ ಹೆಣನ ಮೇಲೆ
ಕಂಚಿಟ್ಟುಂಡಡೆಯೂ ಮಾಣೆ, ಮಾಣೆ. –ಬ.ವ.ದೀ 690

ಅನ್ನ ಆಹಾರ ನೀರು ಇಲ್ಲದೆ ಒಣಗಿಸಿ ಎನ್ನನ್ನು ಕಡ್ಡಿಯಾಗಿ ಮಾಡಿದರೂ ನನ್ನ ಪ್ರಾಣವಿರುವನ್ನಕ್ಕ ನಿಮ್ಮ ಚರಣವನ್ನು ನೆನೆವುದನ್ನು ಬಿಡುವುದಿಲ್ಲ; ನಿನಗೆ ಶರಣು ಎಂಬುದನ್ನು ಬಿಡುವುದಿಲ್ಲ. ಲಿಂಗದೇವಯ್ಯಾ ನನ್ನ ಪ್ರಾಣಹೋಗಿ ಶವದ ಮೇಲೆ ತಟ್ಟೆ ಇಟ್ಟುಕೊಂಡು ಉಂಡರೂ ನಿಮಗೆ ಶರಣೆಂಬುದನ್ನು ಬಿಡುವುದಿಲ್ಲ.

692. ಅನ್ಯ ದೈವವ ನೆನೆಯೆ

ಜಾಗ್ರ ಸ್ವಪ್ನಸುಷುಪ್ತಿಯಲ್ಲಿ ಮತ್ತೊಂದ ನೆನೆದಡೆ ತಲೆದಂಡ ತಲೆದಂಡ!
ಹುಸಿಯಾದಡೆ, ದೇವ, ತಲೆದಂಡ, ತಲೆದಂಡ !
ಲಿಂಗದೇವಾ, ನೀವಲ್ಲದೆ ಅನ್ಯವ ನೆನೆದಡೆ
ತಲೆದಂಡ! ತಲೆದಂಡ ! –ಬ.ವ.ದೀ 691

ಜಾಗ್ರ, ಸ್ವಪ್ನ, ಸುಷುಪ್ತಿಯಲ್ಲಿ ಮತ್ತೊಂದು ದೈವವನ್ನು ನೆನೆಯುವುದಿಲ್ಲ. ಇದು ಅಪ್ಪಟ ಸತ್ಯ. ಸುಳ್ಳೆನಿಸಿದರೆ ಇದಕ್ಕೆ ನನ್ನ ತಲೆದಂಡ ಲಿಂಗದೇವಾ, ನೀವಲ್ಲದೆ ಅನ್ಯ ದೈವವನ್ನು ನೆನೆದಡೆ ನನ್ನ ತಲೆಯೇ ಬಿದ್ದು ಹೋಗಲಿ !

ಈ ಮೇಲಿನ ಮೂರು ವಚನಗಳಲ್ಲಿ ಏಕದೇವನಿಷ್ಠೆಯ ವಿಷಯ ಬರುವುದಲ್ಲದೆ ಈ ಆಚರಣೆ ನಮ್ಮ ದೇಶದಲ್ಲಿ ಎಷ್ಟು ಕಷ್ಟಕರ ಎಂಬುದನ್ನು ಸ್ಪಷ್ಟಪಡಿಸುತ್ತದೆ. ದೇವರು ಎಂದರೆ ವಿಶಿಷ್ಟ ಆಕಾರಗಳ ಮೂಲಕವಾಗಿಯೇ ಪರಿಚಯವಾಗುವ ಈ ದೇಶದಲ್ಲಿ ನಿರಾಕಾರ ದೇವರನ್ನು ಕಲ್ಪಿಸಿಕೊಳ್ಳಲಾರದೆ ಹಿಂದುಗಳ ಮನಸ್ಸು ಹೊಯ್ದಾಡುತ್ತದೆ; ಏಕದೇವೋಪಾಸನೆ ಹೇಳಿರುವ ಮಹಾತ್ಮರನ್ನು ಸಾಕಷ್ಟು ಹಿಂಸಿಸಿದೆ. ಮೊಟ್ಟ ಮೊದಲ ಏಕದೇವೋಪಾಸಕರು ಗುರು ಬಸವಣ್ಣನವರು, ನಂತರ ಗುರುನಾನಕರು; ನಂತರ ಸ್ವಾಮಿ ದಯಾನಂದ ಸರಸ್ವತಿಯವರು

ಸ್ವಾಮಿ ದಯಾನಂದರಿಗೂ ಬಹಳ ಕಿರುಕುಳ ಕೊಡಲಾಗಿದೆ. ಅರಬ್ ದೇಶಗಳಲ್ಲಿ ಬಹುದೇವತಾ ಉಪಾಸನೆ ಕಾಬಾ ಸೇರಿ ಎಲ್ಲ ಮಂದಿರಗಳಲ್ಲೂ ಇತ್ತು. ಇದನ್ನು ಖಂಡಿಸಿ ಏಕದೇವೋಪಾಸನೆ ಪ್ರತಿಪಾದಿಸಿದ ಮೊಹಮ್ಮದರಿಗೆ ಜನರು ತುಂಬಾ ಕಿರುಕುಳ ಕೊಟ್ಟರು. ಏಕದೇವೋಪಾಸನೆ ಮೂಢನಂಬಿಕೆಯ ಶತ್ರುವಾಗಿರುವುದರಿಂದ ಬಹುದೇವತೋಪಾಸನೆಯನ್ನು ಬಂಡವಾಳವಾಗಿ ಮಾಡಿಕೊಂಡ ಜನರು ಏಕದೇವೋಪಾಸನೆ ಪ್ರತಿಪಾದಿಸುವವರನ್ನು ಕಟುವಾಗಿ ವಿರೋಧಿಸುವರು.

693.ಕರ್ಮಕ್ಕೆ ಕರ್ತೃವೇ ಕಾರಣ

ಸುಖ ಬಂದರೆ ಪುಣ್ಯದ ಫಲವೆಂಬೆನು
ದುಃಖ ಬಂದರೆ ಪಾಪದ ಫಲವೆಂಬೆನು
ನೀ ಮಾಡಿದಡಾಯಿತ್ತೆಂದೆನ್ನೆನು,
ಕರ್ಮಕ್ಕೆ ಕರ್ತೃವೇ ಕಡೆಯೆಂದೆಂಬೆನು
ಉದಾಸೀನವಿಡಿದು ಶರಣೆನ್ನೆನು,
ಲಿಂಗದೇವಾ, ನೀ ಮಾಡಿದುಪದೇಶವು ಎನಗೀ ಪರಿಯಲಿ;
ಸಂಸಾರವ ಸವೆಯೆ ಬಳಸುವೆನು. –ಬ.ವ.ದೀ 692

ನನ್ನ ಜೀವನದಲ್ಲಿ ಏನಾದರೂ ಸುಖದ ಸನ್ನಿವೇಶ ಒದಗಿದರೆ, ಇದು ಹಿಂದೆ ನಾನು ಮಾಡಿದ ಪುಣ್ಯದ ಫಲ ಎಂದು ಭಾವಿಸುತ್ತೇನೆ. ಹಾಗೆಯೇ ದುಃಖದ ಸನ್ನಿವೇಶ ಒದಗಿ ಬಂದರೆ ಹಿಂದೆ ನಾನು ಮಾಡಿರುವ ಪಾಪದ ಫಲ ಎಂದು ಭಾವಿಸುತ್ತೇನೆಯೇ ಹೊರತು ನೀನು ಕೊಟ್ಟಿದ್ದರಿಂದ ಈ ಸುಖ–ದುಃಖ ಬಂದವು ಎಂದುಕೊಳ್ಳುವುದಿಲ್ಲ. ಕರ್ಮಕ್ಕೆ ಈ ಕ್ರಿಯಾದಿಗಳಿಗೆ ಕರ್ತೃ ಅಂದರೆ ಮಾಡಿದವನೇ ಕಾರಣ ಅಂದರೆ ನಾನೇ ಕಾರಣ ಎಂದುಕೊಳ್ಳುತ್ತೇನೆಯೇ ವಿನಾ ನಿನ್ನ ಬಗ್ಗೆ ಉದಾಸೀನ ತಾಳುವುದಿಲ್ಲ. ಲಿಂಗದೇವನೇ, ಈ ರೀತಿ ನೀನು ನನಗೆ ಉಪದೇಶ ಮಾಡಿದ್ದೀಯ. ಆದ್ದರಿಂದ ಈ ನನ್ನ ಜೀವನವನ್ನು ಪರಹಿತಕ್ಕಾಗಿ ಶ್ರೀಗಂಧದಂತೆ ಸವೆಸಿ ಬಳಸುವೆನು.

ಕೆಲವು ಸಾಹಿತಿಗಳು, ಬರಹಗಾರರು ಗುರು ಬಸವಣ್ಣನವರು ಕರ್ಮಸಿದ್ಧಾಂತವನ್ನು ಒಪ್ಪಿಯೇ ಇಲ್ಲ ಎಂದು ಹೇಳುವುದುಂಟು. ಹಿಂದಿನ ಕರ್ಮಫಲವನ್ನು ಇಂದು ಅನುಭವಿಸಬೇಕು ಎನ್ನುವುದೇ ಕರ್ಮಸಿದ್ಧಾಂತ. ಅದು ಮೇಲಿನ ವಚನದಲ್ಲಿ ಸ್ಪಷ್ಟವಾಗಿದೆ.

694. ಮಾನವರ ಬೇಡೆನು

ಕಾಯದ ಕಳವಳಕ್ಕಂಜಿ, 'ಕಾಯಯ್ಯಾ', ಎನ್ನೆನು;
ಜೀವನೋಪಾಯಕ್ಕಂಜಿ, 'ಈಯಯ್ಯಾ' ಎನ್ನೆನು.
'ಯದ್ ಭಾವಂ ತದ್ ಭವತಿ': ಉರಿ ಬರಲಿ, ಸಿರಿ ಬರಲಿ–
ಬೇಕು, ಬೇಡೆ'ನ್ನೆನಯ್ಯಾ,
ಆ ನಿಮ್ಮ ಹಾರೆನು, ಮಾನವರ ಬೇಡೆನು;
ಆಣೆ, ನಿಮ್ಮಾಣೆ, ಲಿಂಗದೇವಾ. –ಬ.ವ.ದೀ 693

ಶರೀರದ ಕಳವಳಗಳಾದ ಹಸಿವು, ತೃಷೆ, ನಿದ್ರೆ, ರೋಗ-ರುಜಿನಗಳು ವ್ಯಕ್ತಿಯನ್ನು ಮಾನಸಿಕವಾಗಿ ದುರ್ಬಲಗೊಳಿಸುತ್ತವೆ, ಹತಾಶೆಯ ಸ್ಥಿತಿಗೆ ನಿಲ್ಲಿಸುತ್ತವೆ. ದೇವರನ್ನು "ದೇವಾ, ಈ ದುಃಸ್ಥಿತಿಯಿಂದ ನನ್ನನ್ನು ಕಾಪಾಡು." ಎಂದು ಬೇಡಿಕೊಳ್ಳುವಂತೆ ಮಾಡುತ್ತವೆ. ಮಹಾದಾನಿಯಾದ ದೇವನನ್ನು ಇಂಥ ಕ್ಷುಲಕ ವಸ್ತುಗಳಿಗಾಗಿ ಬೇಡುವುದೆ ? ಕಾಯಯ್ಯ ಎಂದು ಗೋಗರೆಯುವುದೆ ? ಗುರು ಬಸವಣ್ಣನವರ ದೃಷ್ಟಿಯಲ್ಲಿ ಸಲ್ಲದು ಶರಣನು ದೇವರ ಕೈಯೊಳಗಣ ಸೂತ್ರದ ಗೊಂಬೆ. ಅವನು ಆಡಿಸಿದಷ್ಟು ಕಾಲ ಆಡುವುದು. ದೇವರ ಇಚ್ಛೆ ಇರುವಷ್ಟು ಕಾಲ ಈ ಭೂಮಿಯ ಮೇಲಿದ್ದು ಕರ್ತವ್ಯ ಮಾಡುವುದು. ಕರೆ ಬಂದಾಕ್ಷಣ ತನ್ನ ಮೂಲನೆಲೆ ದೇವನನ್ನು ಸೇರಲು ಸಂತೋಷದಿಂದ ಸಿದ್ಧನಾಗುವುದು. ಹೀಗಿರುವಾಗ ಕಾಯದ ಕಳವಳಕ್ಕೆ ಅಂಜಿ ದೇವರಿಗೆ ಏಕೆ "ನನ್ನ ಕಾಯಿಲೆ ವಾಸಿ ಮಾಡು" ಎಂದು ಬೇಡಬೇಕು ?

ಜೀವನೋಪಾಯವು ದುಸ್ತರವಾದಾಗ ದೇವರೇ "ನನಗೆ ಸಂಪತ್ತು ಕೊಡು, ಬಡತನದ ಈ ಸಂಕಷ್ಟದಿಂದ ಪಾರು ಮಾಡು." ಎಂದು ಏಕೆ ಕೇಳಬೇಕು? ನಮ್ಮ ಭಾವವು ಹೇಗೋ ಹಾಗೆ ಘಟನೆಗಳು ಸಂಭವಿಸುತ್ತವೆ. ಬೆಂಕಿಯಂತಹ ಸಂಕಷ್ಟವೇ ಬರಲಿ, ಸಂಪತ್ತೇ ಬರಲಿ ಬೇಕು ಎನ್ನುವುದಿಲ್ಲ, ಬೇಡ ಎನ್ನುವುದೂ ಇಲ್ಲ. ಬಂದುದನ್ನು ದೇವರ ಪ್ರಸಾದವೆಂದು ಸ್ವೀಕರಿಸಲಾಗುವುದು. ದೇವಾ ನಿಮ್ಮ ಧ್ಯಾನವನ್ನು ಮರೆಯುವುದಿಲ್ಲ, ಮಾನವರನ್ನು ಬೇಡುವುದಿಲ್ಲ. ನಿಮ್ಮಾಣೆಯಾಗಿಯೂ ಇದು ಸತ್ಯ ಎಂದು ಗುರು ಬಸವಣ್ಣನವರು ಪ್ರತಿಜ್ಞೆ ಮಾಡುತ್ತಾರೆ. ಸಂಕಷ್ಟಗಳು ಬಂದಾಗ, ಜೀವನೋಪಾಯಕ್ಕೆ ತೊಂದರೆ ಬಂದಾಗ ವ್ಯಕ್ತಿಗಳು ಉಳ್ಳವರನ್ನು ಯಾಚಿಸುವುದು ಅಡ್ಡಿ ಬಂದಾಗ ಮನಸ್ಸಿನಲ್ಲೇ ದೇವರನ್ನಾದರೂ ಸಂಕಷ್ಟದಿಂದ ಪಾರು ಮಾಡೆಂದು ಬೇಡಿಕೊಳ್ಳುವನು. ಗುರು ಬಸವಣ್ಣನವರು ಮಾನವರನ್ನು ಬೇಡಲು ಸಿದ್ಧರಿಲ್ಲ, ದೇವರನ್ನು ಸಹ ಬೇಡಲು ಸಿದ್ಧರಿಲ್ಲ. ಏಕೆ ಗೊತ್ತೆ? ಲಿಂಗದೇವನು ಕರುಣಾನಿಧಿ. ಹೆತ್ತ ತಾಯಿ ಮಗುವಿನ ಬೆನ್ನ ಹಿಂದೆಯೇ ಸುಳಿದಾಡುವಂತೆ ಭಕ್ತರ ಬೇಕು-ಬೇಡಗಳನ್ನು ಗಮನಿಸುತ್ತ ದೇವನು ಅಗತ್ಯ ಬಿದ್ದುದನ್ನು ತಾನೇ ಕೊಡುವನೆಂಬ ದೃಢ ವಿಶ್ವಾಸ ಬಸವಣ್ಣನವರದು.

695. ಭಕ್ತನಿಗೆ ಅಂಜಿಕೆ ಏಕೆ ?

ನಾಳೆ ಬಪ್ಪುದು ನಮಗಿಂದೇ ಬರಲಿ
ಇಂದು ಬಪ್ಪುದು ನಮಗೀಗಲೆ ಬರಲಿ;
ಇದಕಾರಂಜುವರು, ಇದಕಾರಳುಕುವರು ?
"ಜಾತಸ್ಯ ಮರಣಂ ಧ್ರುವಂ" ಎಂದುದಾಗಿ
ನಮ್ಮ ಲಿಂಗದೇವರು ಬರೆದ ಬರಹವ ತಪ್ಪಿಸುವಡೆ
ಹರಿ ಹರ ಬ್ರಹ್ಮಾದಿಗಳಿಗಳವಲ್ಲ ! –ಬ.ವ.ದೀ 694

ಸಾಮಾನ್ಯವಾಗಿ ಮನುಷ್ಯರು ಮುಂದೆ ಆಗಬಹುದೆಂದು ಅನಾಹುತಗಳನ್ನು ಕಲ್ಪಿಸಿಕೊಂಡು ಭ್ರಾಂತರಾಗಿ ಸಂಕಷ್ಟಕ್ಕೆ ಒಳಗಾಗುವರು. ಇವರು ಊಹಿಸಿದಷ್ಟು ಭಯಂಕರವಾಗಿ ಘಟನೆ ಸಂಭವಿಸಲಿಕ್ಕಿಲ್ಲ. ಇವರು ವ್ಯರ್ಥವಾಗಿ ಗಾಬರಿಗೆ ಒಳಗಾಗಿ ಉದ್ವಿಗ್ನರಾಗುವರು. ಕಾಯಿಲೆಗಳು ಸಹ ಉದ್ವಿಗ್ನತೆಯಿಂದ ಜಾಸ್ತಿ ಆಗುವ ಸಂಭವವಿರುತ್ತದೆ. ಸಮಾಧಾನ ಚಿತ್ತದಿಂದ ಪ್ರಸಂಗವನ್ನು

ಎದುರಿಸುವುದು ಜ್ಞಾನಿಯ ನಡೆ. ಅದನ್ನು ಈ ವಚನದಲ್ಲಿ ಗುರು ಬಸವಣ್ಣನವರು ವ್ಯಕ್ತಪಡಿಸಿದ್ದಾರೆ.

"ನಾಳೆ ಇಂಥದು ಸಂಭವಿಸಬಹುದು ಎಂಬ ಉದ್ವಿಗ್ನತೆ ಏಕೆ ? ನಾಳೆ ಬರಬಹುದಾದದ್ದು ಇಂದೇ ಬರಲಿ, ಇಂದು ಯಾವಾಗಲೋ ಬರಬಹುದಾದದ್ದು ಈಗಲೇ ಬರಲಿ ಇದಕ್ಕೆ ಯಾರು ಅಂಜುವರು, ಅಳುಕುವರು ? ಹುಟ್ಟಿದವನು ಒಂದು ದಿನ ಸಾಯಲೇಬೇಕು. ಎಂದೋ ಬರಬಹುದಾದ ಮರಣ ಇಂದೇ ಬರಲಿ, ಮರಣಕ್ಕೂ ಮಿಗಿಲಾದ ಅನಾಹುತ, ಅಪಾಯ ಬೇರೊಂದಿಲ್ಲವಲ್ಲ ! ಸೃಷ್ಟಿಕರ್ತನ ಕೈಲಿ ನಮ್ಮ ಜೀವನವಿದೆ. ಅವನು ಬರೆದ ಬರಹವನ್ನು ತಪ್ಪಿಸಿಕೊಳ್ಳಲು ಹರಿ, ಹರ, ಬ್ರಹ್ಮಾದಿಗಳಿಗೇ ಸಾಧ್ಯವಾಗಲಿಲ್ಲವೆಂದಾಗ ಮಾನವರ ಪಾಡೇನು? ಆದ್ದರಿಂದ ಲಿಂಗದೇವನಿಗೆ ನಮ್ಮ ಜೀವನವನ್ನು ಒಪ್ಪಿಸಿ ನಾವು ಸಮಾಧಾನ ಚಿತ್ತರಾಗಿ ಬರುವ ಪ್ರಸಂಗಗಳನ್ನು ಎದುರಿಸಬೇಕು.

696. ಸ್ವಾಮಿ ನಿಷ್ಠೆ

ಕಳಹೋದಡೆ ಕನ್ನದುಳಿಯ ಹಿಡಿವೆ
ಬಂದಿವಿಡಿದಡೆ ನಿಮ್ಮಿಂದ ಮುಂದೆ ನಡೆವೆ;
ಮನಭೀತಿ ಮನಶಂಕೆಗೊಂಡೆನಾದಡೆ
ನಿಮ್ಮಾಣೆ, ನಿಮ್ಮ ಪುರಾತರಾಣೆ!
ಆಳ್ದರ ನಡೆ ಸದಾಚಾರವೆನ್ನದಿರ್ದಡೆ
ಕಟ್ಟಾಳು ಶಿಷ್ಟತನಕ್ಕೆ ಹೋಹ ಕಷ್ಟವ ನೋಡಾ, ಲಿಂಗದೇವ
–ಬ.ವ.ದೀ 695

ನೀವು ಕಳ್ಳತನಕ್ಕೆ ಹೋದರೆ ನಾನು ಕಳ್ಳತನಕ್ಕೆ ಸಹಾಯಕವಾಗುವ ಉಳಿ-ಸುತ್ತಿಗೆ ಹಿಡಿದುಕೊಂಡು ಬರುತ್ತೇನೆ. ಒಂದು ವೇಳೆ ಶತ್ರುವಿನಿಂದ ಬಂಧನಕ್ಕೆ ಒಳಗಾದರೆ ನೀವು ಬಂದಿಯಾಗುವ ಮೊದಲೇ ನಾನು ಮೊದಲು ಬಂದಿಯಾಗುತ್ತೇನೆ. ಯಾವುದೇ ರೀತಿಯ ಭಯವಾಗಲಿ, ಸಂದೇಹವಾಗಲಿ ನನ್ನ ಮನಸ್ಸಿನಲ್ಲಿ ಮೂಡದು. ಇದು ನಿಮ್ಮಾಣೆಯಾಗಿ, ಶರಣರ ಆಣೆಯಾಗಿಯೂ ಸತ್ಯ. ಒಡೆಯರ ನಡೆಯನ್ನು ಸದಾಚಾರ ಎಂದು ಮನ್ನಿಸಬೇಕು. ಒಡೆಯರಿಗೆ ತಿರುಗಿ ಬಿದ್ದಡೆ ಅದು ಸ್ವಾಮಿನಿಷ್ಠೆಯಾಗದೆ ದ್ರೋಹ ಎನಿಸಿಕೊಂಡು ಸೈನಿಕನ ಶಿಷ್ಟಾಚಾರಕ್ಕೆ ಚ್ಯುತಿ ಬಂದಂತೆ ಆಗುತ್ತದೆ.

ಈ ವಚನ ಬಹಳ ವಿಲಕ್ಷಣವಾಗಿದೆ. ಬಿಜ್ಜಳ ಮಹಾರಾಜ ಕಲಚೂರಿ ವಂಶದವನು. ಮಹಾರಾಜನ ದಾಸಿ ಪತ್ನಿಯಲ್ಲಿ ಹುಟ್ಟಿದವನು. ನಿಜವಾದ ವಾರಸುದಾರ ತೈಲಪನು-ಆದರೆ ಅವನು ವಿಲಾಸಿಯಾಗಿ ಮದಿರೆ ಮಾನಿನಿಯರಲ್ಲಿ ಆಸಕ್ತನಾಗಿರುತ್ತಿದ್ದುದರಿಂದ ಚಾಲುಕ್ಯರ ಸಾಮ್ರಾಜ್ಯ ಪತನಗೊಳ್ಳತೊಡಗಿತು. ಅಲ್ಲಲ್ಲೇ ಸಾಮಂತರು ದಂಗೆ ಏಳತೊಡಗಿದರು. ಆಗೆಲ್ಲ ಮಂಗಳವೇಡೆಯಲ್ಲಿ ಮಾಂಡಲೀಕನಾಗಿದ್ದ ಬಿಜ್ಜಳನ ನೆರವನ್ನು ತೈಲಪನು ಕೋರುತ್ತಿದ್ದ. ತೈಲಪನ ದೌರ್ಬಲ್ಯವನ್ನು ಗುರುತಿಸಿದ ಬಿಜ್ಜಳನು ಅವನನ್ನು ಗೃಹಬಂಧನದಲ್ಲಿರಿಸಿ ತಾನೇ ಆಡಳಿತ ಸೂತ್ರವನ್ನು ಕೈಗೆ ಎತ್ತಿಕೊಂಡ ಮಂಗಳವೇಡೆಯಿಂದ ಕಲ್ಯಾಣಕ್ಕೆ ತನ್ನ ವಾಸ್ತವ್ಯವನ್ನು ಬದಲಿಸಿದ. ಆ ಸಂದರ್ಭದಲ್ಲೇ ಬಲದೇವ ಮಂತ್ರಿ, ಅವರ ಮಗಳು, ಅಳಿಯ ಬಸವಣ್ಣನವರು ಕಲ್ಯಾಣಕ್ಕೆ

ಆಗಮಿಸಿದರು. ಒಂದೊಂದೇ ಹಂತ ಮೇಲೇರುತ್ತ ಗುರು ಬಸವಣ್ಣನವರು ಪ್ರಧಾನಿಯೂ ಆದರು. ವಂಶಪಾರಂಪರ್ಯವಾದ ಕ್ಷಾತ್ರ ಧರ್ಮದ ಪ್ರಕಾರ ಬಿಜ್ಜಳನು ಮಾಡಿದ್ದು ತಪ್ಪು, ಆದರೆ ತೈಲಪ ವಿಲಾಸಿ,ದುರ್ಬಲ. ಬಿಜ್ಜಳನೋ ಶೂರ,ಪ್ರಜಾಪ್ರೇಮಿ. ಹೀಗಾಗಿ ಗುರು ಬಸವಣ್ಣನವರು ಸ್ವಾಮಿನಿಷ್ಠೆಯನ್ನು ಬಿಜ್ಜಳನ ಕುರಿತು ಹೊಂದಬೇಕಾಯಿತು. ಜನ್ಮ ಶ್ರೇಷ್ಠತೆಯಿಂದ ಯಾರೂ ಬ್ರಾಹ್ಮಣರಲ್ಲ, ಜಂಗಮರಲ್ಲ ಎಂದಂತೆ ವಂಶ ಆಧಾರಿತವಾಗಿ ಯಾರೂ ರಾಜರಾಗಬೇಕಾಗಿಲ್ಲ, ಅರ್ಹತೆಯ ಆಧಾರದ ಮೇಲೆ ಗುರುತ್ವ, ಜಂಗಮತ್ವ ಬರುವಂತೆ ರಾಜತ್ವವೂ ಬರಬೇಕು ಎಂಬುದೇ ಬಸವ ಸಿದ್ಧಾಂತ. ಬಹುಶ: ಒಮ್ಮೆ ಬಿಜ್ಜಳನೇ ಕೇಳಿರಬಹುದು. " ನಿಜ ವಾರಸುದಾರರಾದ ತೈಲಪರನ್ನು ಕಡೆಗಣಿಸಿ ನಾನು ರಾಜಸೂತ್ರವನ್ನು ಕೈಗೆ ತೆಗೆದುಕೊಂಡದ್ದು ನಿಮಗೆ ತಪ್ಪೆನಿಸುತ್ತದೆಯೆ ಬಸವಣ್ಣನವರೆ ?" ಎಂದು. ಆಗ ಗುರು ಬಸವಣ್ಣನವರು ಈ ವಚನವನ್ನು ಹೇಳಿರಬಹುದು.

" ಈಗ ನಾನು ತಮ್ಮ ಅಧೀನದಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿ. ರಾಜ್ಯದ ಹಿತದೃಷ್ಟಿಯಿಂದ .ನೀವು ಕಳ್ಳತನ ಮಾಡಲು ಮುಂದಾದರೆ ನಾನು ಕನ್ನದ ಉಳಿ ಹಿಡಿದು ನಿಮ್ಮೊಡನೆ ಬರುವೆನು. ಶತ್ರುಗಳು ನಿಮ್ಮನ್ನು ಬಂಧಿಸಿದರೆ ನಿಮಗಿಂತ ಮುಂಚೆ ನಾನು ಬಂದಿಯಾಗುವೆ. ಈ ಬಗ್ಗೆ ನನ್ನ ಮನಸ್ಸು ಯಾವುದೇ ಭೀತಿಗೆ ಒಳಗಾಗದು, ಶಂಕೆಯನ್ನೂ ತಾಳದು. ನಾನು ಕೆಲಸ ಮಾಡುತ್ತಿರುವ ಒಡೆಯರ ನಡೆಯನ್ನು ಸದಾಚಾರ ಎನ್ನಲೇಬೇಕು. ಸೈನಿಕರು ರಾಜನ ಕರೆಯಂತೆ ನಡೆಯ ಬೇಕಾದುದೇ ಶಿಷ್ಟಾಚಾರ. ಕರೆಯನ್ನು ಮನ್ನಿಸದಿದ್ದರೆ ಸೈನಿಕರ ಶಿಷ್ಟಾಚಾರಕ್ಕೆ ಚ್ಯುತಿ ಬರುತ್ತದೆ. ಅದೇ ರೀತಿ ಪ್ರಜಾಪ್ರೇಮಿಯಾದ ತಮ್ಮಿಂದ ನಾಡಿನ ಜನತೆಗೆ ಒಳಿತಾಗುವ ಕಾರಣ ನಾನು ತಮ್ಮ (ಆಳ್ದರ)ನಡೆಯನ್ನು ಸದಾಚಾರ ಎಂದೇ ತಿಳಿದಿದ್ದೇನೆ" ಎಂದು ಗುರು ಬಸವಣ್ಣನವರು ಈ ವಚನದ ಮೂಲಕ ಬಿಜ್ಜಳನಿಗೆ ಉತ್ತರ ಕೊಟ್ಟಿರುವಂತೆ ತೋರುತ್ತದೆ.

697. ತತ್ವನಿಷ್ಠೆ

ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯಾ
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ;
ಕೇಳು! ಲಿಂಗದೇವಾ, ಮರಣವೆ ಮಹಾನವಮಿ !!

–ಬ.ವ.ದೀ 696

"ಜೋಳಕ್ಕಾಗಿ ಅಂದರೆ ಹೊಟ್ಟೆ ಪಾಡಿಗಾಗಿ ಬಾಳುವೆ ಮಾಡುವವನು ನಾನಲ್ಲ, ವೇಳೆ ವಾಳಿಯವ ನಾನು"ಎನ್ನುತ್ತಾರೆ ಗುರು ಬಸವಣ್ಣನವರು. ವೇಳೆ ಅಂದರೆ ಸಮಯ. ಈ ಪದಕ್ಕೆ ಎರಡು ಅರ್ಥಗಳುಂಟು. ಇಂದು ನಾವು ಧರ್ಮ ಎಂದು ಕರೆಯುವ ವಿಚಾರ–ಆಚಾರ ಸಮುಚ್ಚಯವನ್ನು ಅಂದು 'ಸಮಯ' ಎಂದು ಕರೆಯುತ್ತಿದ್ದರು. "ಎನ್ನ ಭಕ್ತನೆಂಬರು, ಸಮಯಾಚಾರಿ ಎಂಬರು. ನಾನೇನು ಪಾಪವ ಮಾಡಿದೆನೊ?" ಎಂದು ಒಂದು ವಚನದಲ್ಲಿ ಪರಿತಪಿಸಿದ್ದಾರೆ ಗುರು ಬಸವಣ್ಣನವರು. ಅವರನ್ನು ಶಿವ ಸಮಯ (ಧರ್ಮ) ಪ್ರತಿಷ್ಠಾಪನಾಚಾರಿ ಎಂದು ಕರೆಯಲಾಗಿದೆ. ಆದ್ದರಿಂದ ಮೇಲಿನ ವಚನದಲ್ಲಿ ವೇಳೆ ಎನ್ನುವುದನ್ನು ಧರ್ಮ ಎಂದು ಅರ್ಥೈಸಿದರೆ ಆಗ, ನಾನು ಒಂದು ತುತ್ತು ಅನ್ನಕ್ಕಾಗಿ ಜೀವಿಸಿರುವವನಲ್ಲ, ಧರ್ಮ ಪಾಲನೆಗಾಗಿ ಜೀವಿಸಿದ್ದೇನೆ " ಎಂಬ ಅರ್ಥ ಬರುವುದು. ವೇಳೆ ಅಂದರೆ ಸಮಯ, ಕಾಲ ಎಂದು ಅರ್ಥ

ಮಾಡಿದರೆ ಆಗ ನಾನು ಸೂಕ್ತ ಸಮಯಕ್ಕೆ ನೆರವಾಗುವವನು ಎಂದು ಅರ್ಥ ಮಾಡ ಬೇಕಾಗುತ್ತದೆ. ಹೊಟ್ಟೆಪಾಡಿಗೆ ಬದುಕುವವರು ತಾತ್ವಿಕ ಸಂಘರ್ಷ ಬಂದಾಗ ಸುಲಭವಾಗಿ ತತ್ವವನ್ನು ಬಿಟ್ಟು ಬಿಡುವರು, ಧೈರ್ಯಗೆಟ್ಟು ಓಡುವರು. ತತ್ವ ನಿಷ್ಠರು ಎಂಥ ಪ್ರಸಂಗದಲ್ಲೂ ತತ್ವವನ್ನು ಬಲಿಗೊಡದೆ ರಕ್ಷಣೆ ಮಾಡುವರು. ಏಕೆಂದರೆ ಅವರು ಸಾವಿಗೆ ಅಂಜುವುದಿಲ್ಲ. ತತ್ವಕ್ಕಾಗಿ ಪ್ರಾಣ ಕೊಡುವುದು ಶರಣರಿಗೆ ಹಬ್ಬ, ದುಃಖಕಾರಕವಲ್ಲ. ಹೀಗಾಗಿ ಶರಣರಿಗೆ "ಮರಣವೇ ಮಹಾನವಮಿ." ಒಬ್ಬ ರಾಜನ ಬಳಿ ನಿಷ್ಠಾವಂತ ಪ್ರಧಾನಿ ಇರುತ್ತಾನೆ. ಅವನು ದೇವರಲ್ಲಿ ಅನನ್ಯವಾದ ನಂಬಿಕೆ ಹೊಂದಿದವನು. ಏನೇ ಘಟಿಸಿದರೂ ಜೋ ಕುಚ್ ಹುವಾ ಅಚ್ಛಾ ಹುವಾ ಎನ್ನುತ್ತಿದ್ದ. ಒಂದು ದಿನ ರಾಜನ ಎಡಗೈ ಬೆರಳೊಂದು ಕತ್ತರಿಸಿ ಹೋಯಿತು. ರಾಜನು ದುಃಖದಿಂದ ಹೇಳಿದಾಗ ಆ ಪ್ರಧಾನಿ ಎಂದಿನ ಅಭ್ಯಾಸದಂತೆ "ಆಗುವುದೆಲ್ಲ ಒಳ್ಳೆಯದಕ್ಕೆ" ಎಂದುಬಿಟ್ಟ. ರಾಜನಿಗೆ ಬಹಳ ಕೋಪ ಬಂದು ಆ ಪ್ರಧಾನಿಯನ್ನು ಕೆಲಸದಿಂದ ತೆಗೆದ. ಆಗಲೂ ಅವನು, 'ಆಗುವುದೆಲ್ಲ ಒಳ್ಳೆಯದಕ್ಕೆ' ಎಂದು ಮನೆಗೆ ನಡೆದ. ಕೆಲವಾರು ದಿನಗಳ ಮೇಲೆ ರಾಜನು ಬೇಟೆಗೆಂದು ಕಾಡಿಗೆ ಹೋಗಿ ದಾರಿ ತಪ್ಪಿದನು. ಆಗ ಪರಿವಾರದಿಂದ ಬೇರ್ಪಟ್ಟ ಅವನನ್ನು ದೇವಿಗೆ ನರಬಲಿ ಕೊಡುವ ಮಾಂತ್ರಿಕರು ಹಿಡಿದುಕೊಂಡರು. ಆಗ ಅವನೊಡನಿದ್ದ ಪ್ರಧಾನಿ ಗಾಬರಿಗೊಂಡು ತಪ್ಪಿಸಿಕೊಂಡು ಹೋದನು. ರಾಜನಿಗೆ ಸ್ನಾನಮಾಡಿಸಿ ಬಲಿಗೆ ಸಿದ್ಧಪಡಿಸುವಾಗ ಅವನ ಕೈಬೆರಳೊಂದು ತುಂಡಾದುದನ್ನು ಗಮನಿಸಿ ಮಾಂತ್ರಿಕರು ಬಲಿಗೆ ಇವನು ಯೋಗ್ಯವಿಲ್ಲೆಂದು ಬಿಟ್ಟುಬಿಟ್ಟರು. ಕಷ್ಟದಿಂದ ಅರಮನೆ ಸೇರಿದ ರಾಜನಿಗೆ ಮಾಜಿ ಪ್ರಧಾನಿಯ ಮಾತು ನೆನಪಾಯಿತು. "ಒಂದು ಬೆರಳು ತುಂಡಾಗಿದ್ದರಿಂದ ಜೀವ ಉಳಿಯಿತು. ಹಿಂದಿನ ಪ್ರಧಾನಿಯ ಮಾತಿನಲ್ಲಿ ಎಂಥಾ ಸತ್ಯವಿದೆ!"ಎಂದು ಅಭಿನಂದಿಸಲು ಕರೆಸಿದ."ಅದು ಸರಿ, ನಿನ್ನನ್ನು ಕೆಲಸದಿಂದ ತೆಗೆದಾಗಲೂ ಆಗುವುದೆಲ್ಲ ಒಳ್ಳೆಯದಕ್ಕೆ ಎಂದೆಯಲ್ಲಾ ಅರ್ಥ ವೇನು?"ಆಗ ಹಿಂದಿನ ಪ್ರಧಾನಿ ಹೇಳಿದ, "ನೀವು ಕೆಲಸದಿಂದ ತೆಗೆಯದಿದ್ದರೆ ನಾನೂ ನಿಮ್ಮ ಜೊತೆ ಬರುತ್ತಿದ್ದೆ. ಈಗಿನ ಪ್ರಧಾನಿಯಂತೆ ನಾನು ಹೇಡಿಯಾಗಿ ಓಡಿಹೋಗುತ್ತಿರಲಿಲ್ಲ. ನಿಮ್ಮನ್ನು ಪರೀಕ್ಷಿಸಿ ಬೆರಳಿಲ್ಲವೆಂದು ಬಿಟ್ಟ ಮಾಂತ್ರಿಕರು ನನ್ನನ್ನು ಬಲಿಕೊಡುತ್ತಿದ್ದರು. ನೀವು ಕೆಲಸದಿಂದ ತೆಗೆದುದಕ್ಕೆ ನಾನು ಜೀವಂತ ಉಳಿದೆ." ಹೀಗೆ ನಿಜವಾದ ಭಂಟರು ಎಲ್ಲ ವೇಳೆ ಯಲ್ಲೂ ಜೊತೆಗೆ ನಿಲ್ಲುವ ವೇಳೆವಾಳಿಯಾಗುತ್ತಾರೆ. ರಾಜನಿಗೆ ವೇಳೆವಾಳಿ ಅಂತ ತಮ್ಮನ್ನು ತಾವು ಪ್ರತಿಜ್ಞಾ ಪೂರ್ವಕವಾಗಿ ಅರ್ಪಿಸಿಕೊಂಡ ಶೂರರು ಇರುತ್ತಿದ್ದರು. ಇವರು ಅಂಗರಕ್ಷಕರಂತೆ ತಮ್ಮ ಪ್ರಾಣಕೊಟ್ಟು ರಾಜರನ್ನು ರಕ್ಷಿಸುತ್ತಿದ್ದರು.

698. ವಿಧಿಯನ್ನು ಗೆಲ್ಲುವ ವಿಧಾನ

ಕರ್ಮವೆಂಬ ಅಂಕದೊಡನೆ ತೊಡರಿದೆ;
ಬಿನ್ನಪ ಅವಧಾರು!
ನಿಮ್ಮಾಳಿನ ಭಾಷೆಯ!
ಕಡೆಗಳಕ್ಕೆ ನೂಂಕುವೆ, ಕೆಡಹುವೆನಂಕವ;
ನಡುವೆ ಓಸರಿಸಿದಡೆ ನಿಮ್ಮಾಳಲ್ಲ!

ಶಿವ ಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ. –ಬ.ವ.ದೀ 697

ಕರ್ಮ ಎಂದರೆ ವಿಧಿ; ಅದೃಷ್ಟ, ದೈವ ಎಂಬ ಆಡುಭಾಷೆಯಿಂದಲೂ ಅದನ್ನು ಕರೆಯುತ್ತಾರೆ. ವಿಧಿ ಅಥವಾ ಹಣೆಬರಹ ಎಂದರೇನು? "It is nothing but the force of one's own actions done in his past life."ಹಿಂದಿನ ಜನ್ಮದಲ್ಲಿ ಮಾನವನು ಮಾಡಿದ ಕ್ರಿಯೆ(ಕರ್ಮ)ಗಳ ಮೊತ್ತದ ಒತ್ತಡವೇ ದೈವ. ಭಕ್ತನು, ಶರಣನು ಇಂಥ ವಿಧಿಯೊಡನೆ ಸೆಣಸುವನು –ದೇವ ಶಕ್ತಿಯ ಬಲದಿಂದ. "ದೇವಾ, ನನ್ನ ವಿನಂತಿಯನ್ನು ಗಮನಿಸು. ಇದು ನಿನ್ನ ಪ್ರೀತಿಯ ಸೇವಕನ ಭಾಷೆ (ಪ್ರತಿಜ್ಞೆ) ಕರ್ಮ, ವಿಧಿ ಎನ್ನುವ ಶತ್ರುವಿನೊಡನೆ ಹೋರಾಟಕ್ಕೆ ಇಳಿದಿದ್ದೇನೆ. ಹೋರಾಟದ ಖಂಡಿತ ಯುದ್ಧ ಭೂಮಿಯ ಆಚೆಗೆ ನೂಕುತ್ತೇನೆ; ಶತ್ರುವನ್ನು ಕೆಡುವುತ್ತೇನೆ. ಮಧ್ಯದಲ್ಲಿ ನಾನು ದೂರಸರಿದರೆ ನಿಮ್ಮ ಸೇವಕನಲ್ಲ. ಈ ಕರ್ಮವೆಂಬ ಶತ್ರುವನ್ನು ಹೇಗೆ ಗೆಲ್ಲುವೆ ಎಂದುಕೊಂಡೆಯಾ? ದೇವನಿಗೆ ಶರಣಾಗುವಿಕೆ ಎಂಬ ಪಟ್ಟನ್ನು ಹಾಕುವೆ. ಶರಣರ ಸತ್ಸಂಗ ಎಂಬ ಕತ್ತಿಯಿಂದ ಇರಿಯುತ್ತೇನೆ. ಇವುಗಳ ಬಲದಿಂದ ಹಣೆಯ ಬರಹ, ವಿಧಿಯನ್ನು ಖಂಡಿತಾ ಸೋಲಿಸುತ್ತೇನೆ.

ಕೆಲವು ಬರಹಗಾರರು ವಚನ ವಾಙ್ಮಯದ ಪೂರ್ಣ ಅಭ್ಯಾಸ ಮಾಡದೆ ಗುರು ಬಸವಣ್ಣನವರು ಮತ್ತು ವಚನಕಾರರು ಪೂರ್ವಜನ್ಮ, ಪುನರ್ಜನ್ಮ ಒಪ್ಪಿಲ್ಲ ಎಂದು ವಾದ ಮಾಡುತ್ತಾರೆ. ಪೂರ್ವಜನ್ಮಗಳಿವೆ ಎಂದು ನಂಬುವುದಕ್ಕೆ ನೂರಾರು ವಚನಗಳು. ಲಭ್ಯವಿವೆ. ಮೇಲಿನ ಒಂದು ವಚನವೂ ಅದಕ್ಕೆ ಉದಾಹರಣೆ. ಸರಿಯಾಗಿ ಶರಣ ಪಥದಲ್ಲಿ ನಡೆದವನಿಗೆ ಪುನರ್ಜನ್ಮವಿಲ್ಲ, ಮುಕ್ತಿ ಪ್ರಾಪ್ತಿ. "ನುಡಿದಂತೆ ನಡೆ ಇದೇ ಜನ್ಮ ಕಡೆ" ಎಂಬುದು ಪ್ರಸಿದ್ಧ ಶರಣೋಕ್ತಿ. ನಿಜ, ನುಡಿದಂತೆ ನಡೆಯದವರ ಪಾಡೇನು? ಎಸ್.ಎಸ್.ಎಲ್.ಸಿ ತೇರ್ಗಡೆ ಯಾದವನು ಆ ಪರೀಕ್ಷೆ ಕಟ್ಟಬೇಕಿಲ್ಲ. ತೇರ್ಗಡೆಯಾಗದವನು ಕಟ್ಟಲೇಬೇಕಲ್ಲವೆ? ಮುಕ್ತಿಯಾಗು ವವರೆಗೂ ಜನ್ಮಗಳನ್ನು ಎತ್ತಲೇಬೇಕು. ಈ ಜನ್ಮಚಕ್ರದಿಂದ ಬಿಡುಗಡೆಯಾಗಲು ಇರುವ ಉಪಾಯ ಗಳೆಂದರೆ ಲಿಂಗದೇವನಲ್ಲಿ ಶರಣಾಗತಿ, ಶರಣರೊಡೆನೆ ಅನುಭಾವವ ಮಾಡುವುದು.

699. ದೇವನೊಡನೆ ಸಂಘರ್ಷ

ಕಟ್ಟಿದೆನೊರೆಯ, ಬಿಟ್ಟೆ ಜನ್ನಿಗೆಯರ
ಮುಟ್ಟಿ ಬಂದಿರಿದಡೆ ಓಸರಿಸುವನಲ್ಲ.
ಓಡದಿರು, ಓಡದಿರು!–
ನಿಮ್ಮ ಶರಣರ ಮನೆಯ ಬಿರಿದಿನ ಅಂಕಕಾರ–
ಓಡದಿರು ಓಡದಿರು, ಎಲೆ ಎಲೆ ದೇವಾ,
ಎಲೆ ಎಲೆ ಸ್ವಾಮಿ, ಎಲೆ ಎಲೆ ಹಂದೆ ! ಲಿಂಗದೇವಾ !

–ಬ.ವ.ದೀ 698

ವೇದ(ಶಾಸ್ತ್ರ, ಆಗಮ, ಪುರಾಣ ಇತ್ಯಾದಿಗಳೆಲ್ಲವನ್ನು)ಗಳನ್ನು ಒರೆಯೊಳಕ್ಕೆ ಇಟ್ಟೆ. ಒರೆ ಎಂದರೆ ಕತ್ತಿಯನ್ನು ಇಡುವ ಕವಚ. ಜನಿವಾರ ಧರಿಸುವವರ ಸಂಬಂಧ ತೊರೆದು ದೇವಾ ನಿನ್ನ

ಮಾರ್ಗಕ್ಕೆ ಬಂದಿರುವೆನು. ನೀನು ನನ್ನನ್ನು ಬಗೆಬಗೆಯಾಗಿ ಪರೀಕ್ಷೆ ಮಾಡಬಹುದು.ನೀನು ನನ್ನನ್ನು ಇರಿಯಲು (ಪರೀಕ್ಷಿಸಲು ಬಂದರೆ ನಾನೇನು ಅಂಜಿ ಓಡುವವನಲ್ಲ. ಪರೀಕ್ಷಿಸಲು ಹೆದರಿ ನೀನು ಓಡಬೇಡ. ನಾನಾರು ಗೊತ್ತೆ? ನಿನ್ನನ್ನು ನಂಬಿದ ಶರಣರ ಮನೆಯಲ್ಲಿ ಶರಣ ಎಂಬ ಬಿರುದು ಹೊತ್ತಿಹ ತತ್ವನಿಷ್ಠ ಭಕ್ತ, ಆದ್ದರಿಂದ ನಮ್ಮನ್ನು ಪರೀಕ್ಷಿಸಲು ಹೆದರಿ ನೀನು ಓಡಬೇಡ. ಹಾಗೆ ಹಿಂಜರಿದರೆ ದೇವಾ, ಸ್ವಾಮಿ ನೀನು ಹೇಡಿ ಎಂಬ ಬಿರುದಿಗೆ ಪಾತ್ರನಾಗುವೆಯಷ್ಟೆ

ನೀತಿ: ನಮಗೆ ಕಷ್ಟವನ್ನು ಕೊಡದಿರು ಎಂದು ದೇವರನ್ನು ಬೇಡಬಾರದು. ನಿಜ ಶರಣರಾದವರು ದೇವರನ್ನು, ನೀನು ಬೇಕಾದಷ್ಟು ಕಷ್ಟವನ್ನು ಕೊಡು. ನಾನು ಹೆದರೆನು. ಅವನ್ನು ಎದುರಿಸುವ ಧೈರ್ಯ, ಆತ್ಮವಿಶ್ವಾಸ ಕೊಡು ಎಂದು ದೇವರನ್ನು ಬೇಡಬೇಕು. ಗುರು ಬಸವಣ್ಣನವರು ಬೇಡುವುದೊತ್ತಟ್ಟಿಗಿರಲಿ ದೇವರಿಗೇ ಸವಾಲು ಹಾಕಿದ್ದಾರೆ !

701. ಶರಣರೊಡನೆ ಸೋಲುವಾಟ

ಶರಣರೊಡನೆ ತ್ರವವ ಮಾಡಿ ಮಾರುಗೋಲ ಬಿಡುವೆನಯ್ಯಾ
ತಾಗಲಿ, ತಪ್ಪಲಿ ಗೆಲವೆನ್ನದೆಂಬೆನಯ್ಯಾ,
ಕಳನಿಂದ ಕಡೆಗಳಕ್ಕೆ ಓಡುವೆ, ಲಿಂಗದೇವಯ್ಯಾ. –ಬ.ವ.ದೀ 700

ಗುರು ಬಸವಣ್ಣನವರು ಶರಣರೊಡನೆ ಯುದ್ಧ ಮಾಡುವುದರಲ್ಲಿ ತುಂಬಾ ಆಸಕ್ತರು. ಯಾವ ಯುದ್ದ ? ಅನುಭವಗೋಷ್ಠಿಯಲ್ಲಿ ನಡೆಯುವ ಸಂವಾದ. ಶರಣರ ಬಾಯಿಯಿಂದ ತತ್ವದ ಮಾತುಗಳನ್ನು ಹೊರಡಿಸಬೇಕೆಂದು ತಾವೇ ಮೊದಲ ಮಾತಿನ ಮಾರುಗೋಲು ಬಿಟ್ಟು ಸಂವಾದಕ್ಕೆ ಪ್ರಚೋದಿಸುವರು. ಹಾಗೆ ಎಸೆದ ಮಾತಿನ ಮಾರುಗೋಲು ಸರಿ ಇರಲಿ–ತಪ್ಪಿರಲಿ ಸಂವಾದಕ್ಕೆ ಪ್ರೇರೇಪಿಸಿದ ಗೆಲುವು ಅವರದು. ಮಾತಿನಲ್ಲಿ ಸೋತಂತೆ ಮಾಡುವರು. "ಯುದ್ಧ ಭೂಮಿಯಿಂದ ಆಚೆ ಓಡುತ್ತೇನೆ. ಸೋತೆ ಎಂಬ ಅಪಖ್ಯಾತಿ ಬಂದರೂ ಚಿಂತೆಯಿಲ್ಲ" ಎನ್ನುವ ಪದಗಳ ಮೂಲಕ ಸಂವಾದದಲ್ಲಿ ತಾವು ಸೋತಂತೆ ನಾಟಕವಾಡಿ ಎದುರಾಳಿ ಶರಣರ ಹಿರಿಮೆಯನ್ನು ಮೆರೆಸುತ್ತಿದ್ದರು. ಉದಾಹರಣೆಗೆ ಮೋಳಿಗೆ ಮಾರಯ್ಯನ ಪ್ರಸಂಗ. ಬೇಕೆಂತಲೇ ಅವರ ಮನೆಯಲ್ಲಿ ಹೊನ್ನಿನ ತುಂಡುಗಳನ್ನಿಟ್ಟು ಬಂದು ಅವರ ನಿರ್ಲಿಪ್ತತೆ, ವೈರಾಗ್ಯಗಳನ್ನು ಮೆರೆಸಿದರು. ಆಯ್ದಕ್ಕಿ ಮಾರಯ್ಯ ಬಂದಾಗ ಹೆಚ್ಚು ಅಕ್ಕಿ ಸುರಿಸಿ, ಅವನ ಪತ್ನಿಯು ಪತಿಗೆ ಹಿತೋಪದೇಶ ಮಾಡಿ ಗೃಹಿಣಿ ಹೇಗೆ ಇರಬೇಕು ಎಂಬುದನ್ನು ತೋರಿಸಿಕೊಟ್ಟರು. ನುಲಿಯ ಚಂದಯ್ಯನ ಆಳು ಹಗ್ಗ ಮಾರಲು ಬಂದಾಗ ಜಾಸ್ತಿ ಹಣಕೊಟ್ಟು ಕಳುಹಿಸಿ, ಚಂದಯ್ಯನವರು ಅನವಶ್ಯಕವಾಗಿ ಹೆಚ್ಚಿನ ಹಣ ಪಡೆಯಬಾರದೆಂದು ಹಿಂತಿರುಗಿಸುವಂತೆ ಪ್ರಚೋಸಿದಿಸಿದರು. ತಾವು ಸೋತಂತೆ ಮಾಡಿ ಗೆದ್ದಿದ್ದಾರೆ– ಈ ಅಣಕು ಯುದ್ಧದಲ್ಲಿ.

702. ದ್ವಂದ್ವ ನಿಲುವು.

ಎಲೆ ಗಂಡುಗೂಸೆ ನೀ ಕೇಳಾ, ನಿನಗೊಬ್ಬಗೆಂದುಟ್ಟೆ ಗಂಡುಡಿಗೆಯನು!
ಮತ್ತೊಮ್ಮೆಯಾನು ಗಂಡಪ್ಪೆನಯ್ಯಾ,
ಮತ್ತೊಮ್ಮೆಯಾನು ಹೆಣ್ಣಪ್ಪೆನಯ್ಯಾ; ಲಿಂಗದೇವಾ,
ನಿನಗೆ ವೀರನಪ್ಪೆ, ನಿಮ್ಮ ಶರಣರಿಗೆ ವಧುವಪ್ಪೆ ! –ಬ.ವ.ದೀ 701

****

ದೇವರೊಡನೆ ಸವಾಲೆಸೆದು ಯುದ್ಧಕ್ಕೆ ನಿಲ್ಲುವುದು ಗುರು ಬಸವಣ್ಣನವರಿಗೆ ಬಲು ಇಷ್ಟವಾದ ಸಂಗತಿ. ಆದರೆ ಅದೇ ಛಲವನ್ನು ಶರಣರ ಕುರಿತು ತೋರುವುದಿಲ್ಲ. ಶರಣರನ್ನು ಕಂಡರೆ ಕಿಂಕರರಾಗಿ ಬಿಡುತ್ತಾರೆ. ಇಂಥದೊಂದು ವಿಲಕ್ಷಣ ದ್ವಂದ್ವ ಪ್ರವೃತ್ತಿಯನ್ನು ಈ ವಚನದಲ್ಲಿ ಪ್ರದರ್ಶಿಸಿದ್ದಾರೆ. "ಎಲೈ ಗಂಡಸೇ ನಿನ್ನೊಡನೆ ಕಾದಾಡಲು ನಾನು ಗಂಡು ಉಡುಗೆಯನ್ನು ಉಡುತ್ತೇನೆ. ಒಮ್ಮೆ ಪುರುಷನ ಬಿರುಸುತನವನ್ನು ಮತ್ತೊಮ್ಮೆ ಸ್ತ್ರೀಯ ಮೃದುತನವನ್ನು ನಾನು ಹೊಂದುತ್ತೇನೆ. ನಿನ್ನೊಡನೆ ವೀರತನ ಪ್ರದರ್ಶಿಸಿ ಸವಾಲೆಸೆಯುತ್ತೇನೆ. ಆದರೆ ಶರಣರನ್ನು ಕಂಡಾಗ ವಿನಯದಿಂದ ವಧುವಿನಂತೆ ಶರಣಾಗುತ್ತೇನೆ. ನಿನಗೆ ಎದುರು ನಿಲ್ಲಬಲ್ಲೆ – ಎದುರಾಡಬಲ್ಲೆ, ಶರಣರಿಗೆ ಎದುರು ನಿಲ್ಲುವುದಿಲ್ಲ, ಇದಿರಾಡುವುದಿಲ್ಲ" ಎಂದು ಪ್ರಸ್ತುತ ವಚನದಲ್ಲಿ ಪ್ರತಿಪಾದಿಸಿದ್ದಾರೆ.

703. ಪರಮ ದಾಸೋಹಮೂರ್ತಿ.

ಕಟ್ಟುವೆನುಪ್ಪರ ಗುಡಿಯ ಜಗವರಿಯೆ ಮಾಡುವೆನೆನ್ನ ಕಾಯ ಕೆಡೆವನ್ನಕ್ಕ,
ಬೇಡುವುದೆನ್ನ ತನುಮನಧನವ
ಬೇಡಲಾರದ ಹಂದೇ, ನೀ, ಕೇಳಾ:
ಈ ಬಿರಿದು ಸಂದಿತ್ತು, ಲಿಂಗದೇವಾ. –ಬ.ವ.ದೀ 701

" ಮನೆಯ ಮೇಲೆ ಎತ್ತರದಲ್ಲಿ ಹಾರಾಡುವಂತೆ, ಎಲ್ಲರಿಗೂ ಕಾಣುವಂತೆ ಧ್ವಜವನ್ನು ಕಟ್ಟುತ್ತೇನೆ. ನನ್ನ ಶರೀರ ಬಿದ್ದು ಹೋಗುವವರೆಗೆ ಇಡೀ ಜಗತ್ತಿಗೆ ತಿಳಿಯುಂತೆ ದಾಸೋಹವನ್ನು ಮಾಡುತ್ತೇನೆ. ಲಿಂಗದೇವಾ(ಜಂಗಮರೂಪದಲ್ಲಿ ಬಂದು) ನೀನು ನನ್ನ ಶರೀರ, ಮನಸ್ಸು, ಧನವನ್ನು ಬೇಡು. ಬೇಡುವುದರಲ್ಲಿ (ಜಂಗಮರೂಪದಲ್ಲಿ ಬೇಡಿಸುವುದರಲ್ಲಿ) ನೀನು ಸೋತೆಯಾದರೆ ಆಗ ಹೇಡಿ ಎಂಬ ಬಿರುದು ನಿನಗೆ ಪ್ರಾಪ್ತವಾಗುವುದು." ಶರಣರು ಮನೆಗಳ ಮೇಲೆ ಧ್ವಜಗಳನ್ನು ಕಟ್ಟುತ್ತಿದ್ದರು. ಈ ಮನೆ ಶರಣರದು, ಒಳಹೊಕ್ಕು, ಸಂಕೋಚವಿಲ್ಲದೆ ಪೂಜೆ–ಪ್ರಸಾದ ಮಾಡಬಹುದು ಎಂದು ಕಲ್ಯಾಣಕ್ಕೆ ಬಂದ ಆಗಂತುಕರು ತಿಳಿದುಕೊಳ್ಳಬಹುದಿತ್ತು. ಇಂದು ಜಂಗಮರು ಬಂದರೆ ಬಾಗಿಲು ಮುಚ್ಚಿಕೊಳ್ಳುವ ಪ್ರವೃತ್ತಿ ಕಂಡರೆ ಅಂದು ಶರಣರು ಅತ್ಯಂತ ಉತ್ಸಾಹದಿಂದ ಮನೆಗೆ ಶರಣರು, ಜಂಗಮರು ಬಂದರೆ ಸ್ವಾಗತಿಸಲು, ಉಪಚರಿಸಲು ಸಿದ್ಧರಿದ್ದರು.

704. ದಾಸೋಹ ಮಾಡಲು ಉತ್ಸುಕತೆ.

ಹುಟ್ಟುತ್ತ ದ್ರವ್ಯವನ್ನರಿಯದವಂಗೆ ಐಶ್ವರ್ಯವಂತ ಮಗನಾದಡೆ
ಲಕ್ಷ ಸಂಖ್ಯೆಯ ಹಿರಣ್ಯವ ತಂದು ಸಂತೋಷಪಡಿಸುವಂತೆ,
ಕಾಳಗದ ಮುಖವಾದವುದೆಂದರಿಯದ ಹಂದೆ ನೃಪಂಗೆ
ಒಬ್ಬ ಕ್ಷತ್ರಿಯ ಕುಮಾರ ಹುಟ್ಟಿ ಕಿಗ್ಗಡಲ ರಕ್ತದ ಹೊನಲಲ್ಲಿ
ಕಡಿದು ಮುಳುಗಾಡುವ ಕೊಳುಗುಳವ ಕಂಡು ಪರಿಣಾಮಿಸುವಂತೆ,
ಆನು ಪರಿಣಾಮಿಸುವೆನಯ್ಯಾ, ಲಿಂಗದೇವಾ,
ನೀವು ಬಂದೆನ್ನ ಬೇಡಿದಡೆ!
–ಬ.ವ.ದೀ 702

ಹುಟ್ಟುತ್ತ ಬಡತನದಲ್ಲಿ ಹುಟ್ಟಿ, ಬಡತನವನ್ನೇ ಹಾಸಿಕೊಂಡು, ಹೊದ್ದುಕೊಂಡು ಇರುವ ಒಬ್ಬ ವ್ಯಕ್ತಿಯ ಮಗ ಐಶ್ವರ್ಯವಂತನಾದಡೆ ತಂದೆಗೆ ಆನಂದವೋ ಆನಂದ. ಆ ಮಗ ತನ್ನ

****

ತಂದೆಯನ್ನು ಖುಷಿ ಪಡಿಸಲು ಲಕ್ಷ ಸಂಖ್ಯೆಯ ಬಂಗಾರದ ನಾಣ್ಯಗಳನ್ನು ತಂದುಕೊಡುವನು. ಅದೇ ರೀತಿ ಓರ್ವ ಹೇಡಿ ಇದ್ದಾನೆ ಎಂದುಕೊಳ್ಳುವ. ಅವನಿಗೆ ಒನ್ನ ಶೂರನಾದ ಮಗನು ಹುಟ್ಟಿದರೆ ಆ ಮಗನು ವೀರಾವೇಶದಿಂದ ಹೋರಾಡಿ ಶತ್ರುಗಳನ್ನು ಸಂಹರಿಸಿ, ತಂದೆಯನ್ನು ಸಂತೋಷ ಪಡಿಸುವನು. ಅದೇ ರೀತಿ ಲಿಂಗದೇವಾ ಜಂಗಮ ಮುಖದಿಂದ ನೀವು ಬಂದು ಬೇಡಿದಡೆ ನಾನು ಸಂತೋಷಿಸುವೆನು.

ಬಸವ ಕಲ್ಯಾಣದಲ್ಲಿ ಪರುಷಕಟ್ಟೆ ಎನ್ನುವ ಸ್ಥಳವಿದೆ. ಅಲ್ಲಿ ಕುಳಿತು ಗುರು ಬಸವಣ್ಣನವರು ಗುರುವಾಗಿ ಭಕ್ತರ, ಪ್ರಧಾನಿಯಾಗಿ ಪ್ರಜೆಗಳ ಇಷ್ಟಾರ್ಥವನ್ನು ಪೂರೈಸುತ್ತಿದ್ದರು ಎಂಬ ನಂಬಿಕೆ ಇದೆ.

705. ಲಿಂಗ ಜಂಗಮಾರಾಧನೆಯ ಪ್ರತಿಜ್ಞೆ

ಅರ್ಥವನರ್ಥವ ಮಾಡಿ ಕೋಳಾಹಳಂಗೆಯ್ಯುತ್ತಿರಲಿ,
ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ,
ಮುಟ್ಟುವ ಸ್ತ್ರೀಯ ಕಣ್ಣ ಮುಂದೆ
ಅಭಿಮಾನಗೊಂಡು ನೆರೆವುತ್ತಿರಲಿ;
ಇಂತೀ ತ್ರಿವಿಧವು ಹೊರಗಣವು,
ಇನ್ನೆನ್ನಂಗದ ಮೇಲೆ ಬರಲಿ ಹಿಡಿಖಂಡವ ಮಾಡಿ ಕೊಯ್ಯಲಿ
ಇಕ್ಕುವ ಶೂಲ ಪ್ರಾಪ್ತಿಸಲಿ
ಹಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ;
ಮತ್ತೆಯು ಲಿಂಗಾರಾಧನೆಯ ಮಾಡುವೆ,
ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆ!
ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದಡೆ
ನೀನಂದೆ ಮೂಗ ಕೊಯ್ಯಿ, ಲಿಂಗದೇವಾ! –ಬ.ವ.ದೀ 704

ಲಿಂಗಾರಾಧನೆ, ಜಂಗಮಾರಾಧನೆ, ಪ್ರಸಾದ ಸ್ವೀಕಾರ ಇಂದಿನಂತೆ ಸಹಜ ಕ್ರಿಯೆಗಳಾಗಿರದೆ ಅತ್ಯಂತ ಕ್ರಾಂತಿಕಾರಿ ಪರಿಕಲ್ಪನೆಗಳಾಗಿ, ವ್ಯವಸ್ಥೆಗೆ, ಸಂಪ್ರದಾಯಕ್ಕೆ ವಿರುದ್ಧವಾಗಿದ್ದರಿಂದಲೇ ಸಂಪ್ರದಾಯವಾದಿಗಳಿಂದ ತೀವ್ರ ವಿರೋಶ ವ್ಯಕ್ತವಾಗುತ್ತಿತ್ತು. ಆ ವಿರೋಧ ವಿವಿಧ ಕ್ರಿಯೆಗಳ ಮೂಲಕ ವ್ಯಕ್ತವಾಗುವ ಸಾಧ್ಯತೆ ಇತ್ತು. ಒಂದನೆಯದು, ಮನೆಗೆ ನುಗ್ಗಿ ಮನೆಯೊಳಗಣ ಸಂಪತ್ತನ್ನು ಚೆಲ್ಲಾಪಿಲ್ಲಿ ಮಾಡುವುದು, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ತುಂಡುತುಂಡಾಗಿ ಕತ್ತರಿಸುವುದು, ಇನ್ನೂ ಮುಂದುವರಿದು ಪತ್ನಿಯ ಮೇಲೆ ಎರಗಿ ಅತ್ಯಾಚಾರ ಮಾಡುವುದು ಇವೆಲ್ಲ ಹೊರಗಿನ ದೌರ್ಜನ್ಯ. ಇನ್ನೂ ಮುಂದುವರಿದು ನನ್ನ ಮೇಲೇ ಎರಗಿ ನನ್ನನ್ನು ತುಂಡು ತುಂಡಾಗಿ ಕತ್ತರಿಸಲಿ, ಶೂಲಕ್ಕೆ ಏರಿಸಲಿ, ನಾನು ದಿಕ್ಕುಪಾಲಾಗಿ ಹೋಗುವಂತೆ ಮಾಡಲಿ ನಾನು ಮಾತ್ರ ಇಷ್ಟಲಿಂಗಾರಾಧನೆಯನ್ನು ತೊರೆಯುವುದಿಲ್ಲ, ಜಂಗಮ ಸೇವೆಯನ್ನು ಬಿಡುವುದಿಲ್ಲ, ಪ್ರಸಾದ ತತ್ವದಲ್ಲಿ ಚ್ಯುತಿ ತಂದುಕೊಳ್ಳುವುದಿಲ್ಲ. ಈ ಪ್ರತಿಜ್ಞೆಯಲ್ಲಿ ಸ್ವಲ್ಪವಾದರೂ ಲೋಪವಾದರೆ ನೀನು ಅಂದೇ ನನ್ನ ಮೂಗಕೊಯ್ಯಿ ಅಂದರೆ ಶಿಕ್ಷಿಸು." ಎಂದು ಲಿಂಗದೇವನಲ್ಲಿ ಪ್ರಸ್ತುತ ಪಡಿಸುತ್ತಾರೆ.

ಇಷ್ಟಲಿಂಗಾರಾಧನೆಯಲ್ಲಿ ಏಕದೇವೋಪಾಸನೆಯಿದೆ. ಅನ್ಯ ಗುಡಿ ಗುಂಡಾರ ಸಂದರ್ಶನ ಅನ್ಯ ದೇವತಾಪೂಜೆ ನಿಷಿದ್ಧ. ಗುರು ಬಸವಣ್ಣನವರು ಇಷ್ಟಲಿಂಗ ದೀಕ್ಷೆ ನೀಡಿ ಜನರನ್ನು ಧರ್ಮಾಂತರಗೊಳಿಸಿ ಏಕದೇವೋಪಾಸಕರನ್ನಾಗಿ ಮಾಡುತ್ತಲಿದ್ದರು. ಬಹುದೇವತೋಪಾಸನೆ, ಗುಡಿ ಗುಂಡಾರ ನಿರ್ಮಾಣದಿಂದಲೇ ತಮ್ಮ ಹೊಟ್ಟೆಪಾಡು ಕಂಡುಕೊಳ್ಳುತ್ತಿದ್ದ ವೈದಿಕ ಪುರೋಹಿತ ಶಾಹಿಗೆ ಇದರಿಂದ ಕೋಪ ಬರುತ್ತಿತ್ತು. ಅವರು ತೀವ್ರ ವಿರೋಧ ವ್ಯಕ್ತ ಪಡಿಸುತ್ತಿದ್ದರು. ವೈದಿಕ ಪುರೋಹಿತ ಶಾಹಿ ಎಲ್ಲ ಧಾರ್ಮಿಕ ಕ್ರಿಯೆಗಳ ಹಕ್ಕನ್ನು ತನ್ನ ಕೈಯೊಳಗೆ ಇಟ್ಟುಕೊಂಡಿತ್ತು. ಇದಕ್ಕೆ ವ್ಯತಿರಿಕ್ತವಾಗಿ ನಾನಾ ರೀತಿಯ ಜನರು ಜಂಗಮರಾಗಿ ಧಾರ್ಮಿಕ ಹಕ್ಕುಗಳನ್ನು ವಿಕೇಂದ್ರೀಕರಣ ಮಾಡಿ, ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯ, ಪೂಜೆಯ ಹಕ್ಕು ಸಿಗುವಂತೆ ಮಾಡುತ್ತಿದ್ದರು. ಹೀಗಾಗಿ ಜಂಗಮ ವ್ಯವಸ್ಥೆ (Missionary system) ಯನ್ನು ವೈದಿಕರು ವಿರೋಧಿಸುವುದು ಸಹಜ. ಇನ್ನು ಪ್ರಸಾದ ತತ್ವ, ಉಣ್ಣುವುದು ಒಂದು ವೈಯಕ್ತಿಕ ಕ್ರಿಯೆಯಾದರೂ ಪ್ರಸಾದ ಸ್ವೀಕಾರ ತಾತ್ವಿಕ ಹಿನ್ನೆಲೆಯಿಂದ ಕೂಡಿತ್ತು. ಗುಡಿ ಗುಂಡಾರ, ಅನ್ಯದೇವತಾರ್ಚನೆಯ ಪ್ರಸಾದವನ್ನು ಶರಣರು ಸ್ವೀಕರಿಸುತ್ತಿರಲಿಲ್ಲ. ಗುರು ಲಿಂಗ ಜಂಗಮದ ಪ್ರಸಾದ ಮಾತ್ರ ಸ್ವೀಕರಿಸುತ್ತಿದ್ದರು. ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ ಮಾಡಿ, ಜಂಗಮದರ್ಶನ ಪಡೆಯುತ್ತಿದ್ದ ಲಿಂಗಾಯತರು ಗುಡಿಗಳ ಸಂದರ್ಶನಕ್ಕೆ ಹೋಗದೆ ಇದ್ದುದರಿಂದ ವೈದಿಕ ಪುರೋಹಿತ ಶಾಹಿಗೆ ಪೆಟ್ಟು ಬಿದ್ದುದರಿಂದ ಅದು ಉದ್ವಿಗ್ನಗೊಳ್ಳುವುದು ಸ್ವಾಭಾವಿಕ. ಹೀಗಾಗಿ ಕ್ರಾಂತಿಯ ಸೂತ್ರಧಾರ ಬಸವಣ್ಣನವರಿಗೆ ಬಗೆಬಗೆಯ ಕಿರುಕುಳ ಕೊಡಬಹುದು ಎಂಬ ನಿರೀಕ್ಷೆ. ಇಷ್ಟೆಲ್ಲಾ ತೊಂದರೆ ಬಂದರೂ ನಾನು ಲಿಂಗಾರಾಧನೆ, ಜಂಗಮಾರಾಧನೆ, ಪ್ರಸಾದ ತತ್ವ ಇವುಗಳನ್ನು ಕೈ ಬಿಡುವುದಿಲ್ಲ ಎಂಬ ಭಾಷೆಯನ್ನು ಗುರು ಬಸವಣ್ಣನವರು ತೊಡುತ್ತಾರೆ.

(850ವರ್ಷಗಳ ಹಿಂದೆ ಛಲದಿಂದ ಹುಟ್ಟಿದ ಲಿಂಗಾಯತ ಧರ್ಮಾನುಯಾಯಿಗಳನ್ನು ಇಂದು ವೈದಿಕರು ಹೋಮ –ಹವನ, ಯಜ್ಞ– ಯಾಗಗಳ ಕಡೆಗೆ, ಬಹುದೇವತೋಪಾಸನೆಗೆ ಸೆಳೆದು ಧರ್ಮಪಿತ ಬಸವಣ್ಣನವರ ಭಾಷೆಗೆ ಭಂಗ ತರುತ್ತಿರುವುದು ವಿಪರ್ಯಾಸ.)

706. ನೀಡುವ ಉತ್ಸಾಹ

ತನುವ ಬೇಡಿದಡೀವೆ, ಮನವ ಬೇಡಿದಡೀವೆ.
ಧನವ ಬೇಡಿದಡೀವೆ, ಬೇಡು ಬೇಡಲೆ ಹಂದೇ
ಕಣ್ಣ ಬೇಡಿದಡೀವೆ, ತಲೆಯ ಬೇಡಿದಡೀವೆ;
ಲಿಂಗದೇವಾ, ನಿಮಗಿತ್ತು ಶುದ್ಧನಪ್ಪೆ
ನಿಮ್ಮ ಪುರಾತರ ಮನೆಯಲ್ಲಿ. –ಬ.ವ.ದೀ 705

ಲಿಂಗದೇವನೇ, ನನ್ನ ಶರೀರವನ್ನು ಬೇಡಿದರೆ ಕೊಡುವೆ, ಮನಸ್ಸು ಕೇಳಿದರೂ ಕೊಡುವೆ, ಸಂಪತ್ತನ್ನು ಕೇಳಿದರೂ ಕೊಡುವೆ. ಇಷ್ಟು ಸಾಲದೆ ಕಣ್ಣನ್ನು ಕೊಡು ಎಂದರೂ ಕೊಡುವೆ ಶಿರಸ್ಸನ್ನು ಬೇಕಾದರೂ ಕೊಡುತ್ತೇನೆ, ಜಂಗಮದ ಮೂಲಕ ಬೇಡು. ಶರಣರ ಪರಂಪರೆಯಲ್ಲಿ ನಿಮಗೆ ನೀಡಿ ಶುದ್ಧನಾಗುತ್ತೇನೆ. ಬೇಡಲು ಹೆದರಿ ಹೇಡಿಯಾಗಬೇಡ, ಜಂಗಮದ ಮೂಲಕ ಬೇಡು." ಈ ವಚನದಲ್ಲಿ ಗುರು ಬಸವಣ್ಣನವರು ತನು–ಮನ–ಧನ–ಪ್ರಾಣ ದಾಸೋಹ ಎಲ್ಲದಕ್ಕೂ ಸಿದ್ಧರಾಗಿರುವ ಉತ್ಸಾಹವನ್ನು ಕಾಣುತ್ತೇವೆ. (ಮುಂದುವರಿಯುವುದು.....)

ದಾನಿಗಳ ಗಮನಕ್ಕೆ

ತಟ್ಟೆ -ಲೋಟಗಳ ಕೊಡುಗೆಗೆ ಸೂಚನೆ

ಶರಣ ಮೇಳದ ಬೃಹತ್ ದಾಸೋಹಕ್ಕೆ ಶರಣ ಬಂಧುಗಳು ತಟ್ಟೆಗಳನ್ನು ಕೊಟ್ಟುದು ಉಪಯೋಗವಾಗುತ್ತಿದೆ. ಈ ಮಧ್ಯೆ ತಟ್ಟೆ - ಲೋಟಗಳು ಹಳೆಯವಾಗಿವೆ, ಮುರಿದಿವೆ, ಕಳೆದೂ ಹೋಗಿವೆ. ಶರಣ ಮೇಳದ ದಾಸೋಹ ಬೆಳೆಯುತ್ತಲಿದೆ. ಆದ್ದರಿಂದ ಶರಣ ಬಂಧುಗಳಿಂದ ತಟ್ಟೆಗಳ ದಾನ ಅಗತ್ಯವಾಗಿದೆ. 11 ಅಂಗುಲ ಅಗಲ, ಕಂಠವಿರುವ ಸ್ಟೀಲ್ ತಟ್ಟೆಗಳನ್ನು ತಮ್ಮ ತಮ್ಮ ಶಕ್ತ್ಯಾನುಸಾರ ಕೊಂಡು ತಂದು ಶರಣ ಬಂಧುಗಳು ದೇಣಿಗೆಯಾಗಿ ನೀಡಲು ಅವಕಾಶ ಉಂಟು. ಅದೇ ರೀತಿ ನೀರಿನ ಲೋಟ, ಚಿಕ್ಕ ಟೀ ಲೋಟಗಳನ್ನು ತಂದು ಕೊಡಲು ಅವಕಾಶ ಉಂಟು. ಶರಣ ಮೇಳಕ್ಕೆ ತಂದು ಕೊಡಬಹುದು. ಇಲ್ಲವೇ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಶರಣ ಮೇಳ ಪ್ರಚಾರಕ್ಕೆ ಬಂದಾಗ ಕೊಡಬಹುದು.

ಹೋಲ್‌ಸೇಲ್ ಬೆಲೆ ವಿಚಾರಿಸಿದಾಗ 11 ಅಂಗುಲದ ಉತ್ತಮ ಸ್ಟೀಲ್ ತಟ್ಟೆಯ ಬೆಲೆ ಒಂದಕ್ಕೆ 65ರೂ ಇದೆ. ದಾನಿಗಳು ಹಣದ ರೂಪದಲ್ಲೂ ಕೊಡಬಹುದು. ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಖರೀದಿಸಲಾಗುತ್ತದೆ. ನೀರಿನ ಲೋಟ 12ರೂ. ಟೀ ಲೋಟ 6 ರೂ. ಬೆಲೆ ಇದೆ. ಅವರವರ ಶಕ್ತ್ಯಾನುಸಾರ ಕೊಡಬಹುದು. ಪ್ರತಿಯೊಬ್ಬ ಶರಣರೂ ಶರಣಮೇಳಕ್ಕೆ ಬರುವಾಗ ಕನಿಷ್ಟ ಒಂದು ತಟ್ಟೆ ಮತ್ತು ಒಂದು ಲೋಟವನ್ನು ತಂದು ಸಮರ್ಪಿಸಿದರೂ ಉಪಕಾರವಾಗುತ್ತದೆ.

- ಜಗದ್ಗುರು ಮಾತೆ ಮಹಾದೇವಿ

ಶರಣ ಮೇಳದಲ್ಲಿ ಬಿಡುಗಡೆಯಾಗಲಿರುವ ಸಾಮಾಗ್ರಿ

1. ಬಸವ ವಚನಾಮೃತ - ಭಾಗ 7, ವಿಶ್ವಗುರು ಬಸವಣ್ಣನವರ 649ನೆಯ ವಚನದಿಂದ 756 ನೆಯ ವಚನದವರೆಗೆ ವ್ಯಾಖ್ಯಾನ ಸಹಿತವಾಗಿ ಬೆಲೆ-35ರೂ.

2. ದೇವಪೂಜಾ ವಿಧಾನ (ಇಷ್ಟಲಿಂಗ ಪೂಜೆಯ ವಿಧಿ -ವಿಧಾನ) ಪುಸ್ತಕದ ಹದಿನೆಂಟನೆಯ ಆವೃತ್ತಿ - ಬೆಲೆ -30ರೂ.

3. ವಿಶ್ವಧರ್ಮ ಪ್ರವಚನದ ವೀಡಿಯೋ ತಟ್ಟೆಗಳು (ಸಿಡಿ) ಒಂದೊಂದು ಸುಮಾರು ಒಂದು ಗಂಟೆ ನಲವತ್ತು ನಿಮಿಷ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರದು 25 ತಟ್ಟೆಗಳು, ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪ್ರವಚನದ ತಟ್ಟೆ 10, ಒಂದೊಂದು 55 ರೂ, ಪೂರ್ಣ ಸೆಟ್ಟನ್ನು ತೆಗೆದುಕೊಂಡವರಿಗೆ ವಿಶೇಷ ರಿಯಾಯಿತು ಇರುತ್ತದೆ.

4. ಶರಣ ಮೇಳ - ಬೆಳ್ಳಿಹಬ್ಬದ ನೆನಪಿನ ಕಾಣಿಕೆ - ದೊಡ್ಡ ಆಕಾರದ್ದು 150ರೂ, ಸಣ್ಣದು -100ರೂ

5. 2012ರ ನೂತನ ವಾದ ಬಸವ ಕಿರಣ ಗೋಡೆ ಕ್ಯಾಲೆಂಡರ್ - 15ರೂ ಹಾಗೂ ಬಸವ ಕೀರ್ತಿ ಪಾಕೆಟ್ ಕ್ಯಾಲೆಂಡರ್ -8ರೂ

ನೆನಪಿನ ಬುತ್ತಿ ಬಿಚ್ಚಿದಾಗ -5

- ಮಾತಾಜಿ

ದೀಕ್ಷೆ ಪಡೆಯುವಾಗ ನನಗೆ ಆನಂದದ ಮಹಾಪೂರವೇ ಹರಿಯುತ್ತಿತ್ತು. ಇಡೀ ಜೀವನದ ಮಹತ್ವಪೂರ್ಣವಾದ ಕ್ಷಣವದು. ಅದೇ ರೀತಿ ದೀಕ್ಷೆ ನೀಡುವಾಗ ಪೂಜ್ಯರಿಗೂ ವಿಶೇಷ ಅನುಭವವಾದುದನ್ನು ಗುರುಗಳು **"ಚಿನ್ಮೂಲಾದ್ರಿ ಚಿತ್ಕಳೆ"** ಕೃತಿಯಲ್ಲಿ ಬರೆದಿದ್ದಾರೆ.

"ನಾನು ಮಾತಾಜಿಗೆ ದೀಕ್ಷೆ ಮಾಡಿದ ಅನುಭವ ವೈಶಿಷ್ಟ್ಯಪೂರ್ಣವಾಗಿದೆ. ನಾನು ಸಾವಿರಾರು ಜನರಿಗೆ ದೀಕ್ಷೆ ಮಾಡಿದ್ದೇನೆ. ದೀಕ್ಷಾ ಸಮಯದಲ್ಲಿ ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದು. ಶಾಂಭವೀಮುದ್ರೆಯಲ್ಲಿ ಕುಳಿತು ಅನಿಮಿಷ ದೃಷ್ಟಿಯಿಂದ ನೋಡಿ, ಇಷ್ಟಲಿಂಗಕ್ಕೆ ಚಿತ್ಕಳೆ ತುಂಬುವಾಗ ನನಗೆ ದೈವೀ ಸಾಮರಸ್ಯದ ಆನಂದವಾಯಿತು. ಭಾವಸಮಾಧಿಯನ್ನು ಹೊಂದಿದ ನಾನು ವೇಧಾ, ಮಂತ್ರ, ಕ್ರಿಯಾದೀಕ್ಷೆಗಳನ್ನು ಶಾಸ್ತ್ರೋಕ್ತವಾಗಿ ಪೂರೈಸಿದೆ. ಮಂತ್ರೋಪದೇಶ ಮಾಡುವಾಗ ಅಪೂರ್ವ ಆನಂದವೆನಿಸಿ, ನನ್ನ ಅಂತರ್ವಾಣಿ ಭಿತ್ತಿಯಲ್ಲಿ ಏನೋ ಸಂಕೇತಗಳು ಮೂಡಿದವು. ಯಾವ ಅಕ್ಕಮಹಾದೇವಿಯನ್ನು ಹತ್ತಾರು ವರ್ಷಗಳಿಂದ ನನ್ನ ಆರಾಧ್ಯ ದೇವತೆಯೆಂದು ಆರಾಧಿಸಿ, ಆಕೆಯ ಕಾರುಣ್ಯಕ್ಕಾಗಿ ಹಂಬಲಿಸುತ್ತಿರುವೆನೋ, ಅದೇ ತಾಯಿಯೇ ಈಗ ಸಾಕಾರ ರೂಪ ತಾಳಿ ಅಭಿನವ ಅಕ್ಕಮಹಾದೇವಿಯಾಗಿ ಗೋಚರಿಸಿದಳು. "ಅಹುದು... ಅದೇ ಅಕ್ಕನೇ ಮಾತೆಯ ರೂಪದಲ್ಲಿ ಬಂದಿದ್ದಾಳೆ..." ಎಂದು ನನ್ನ ಅಂತರ್ವಾಣಿ ಉಲಿಯಿತು.

ರಾಮಕೃಷ್ಣ ಪರಮಹಂಸರು ನರೇಂದ್ರ (ಸ್ವಾಮಿ ವಿವೇಕಾನಂದ)ನ ಬರವಿಗಾಗಿ ಹಲವಾರು ವರುಷ ಕಾಲ ಹಂಬಲಿಸಿ, ಅವರನ್ನು ಕಂಡಾಗ ಆನಂದದಲ್ಲಿ ಮೈಮರೆತಂತೆ, ನನ್ನ ಅನುಭವವೂ ಆಯಿತು. "ಅಮ್ಮಾ.... ನಿಮ್ಮ ಪಾದ ಪೂಜೆ ಮಾಡಿ, ಪಾದೋದಕ ಸ್ವೀಕರಿಸುವೆ..." ನಾನು ನುಡಿದಾಗ, ಮಾತಾಜಿ ಸ್ತಂಭೀಭೂತರಾದರು. ದೀಕ್ಷಾಗುರುಗಳಾದ ನೀವು, ನನಗೆ ಧರ್ಮ ದೀಕ್ಷೆ ನೀಡಿ ಪುನರ್ಜನ್ಮ ಕೊಟ್ಟ ಪಿತೃಸ್ವರೂಪರು. ನಿಮ್ಮಿಂದ ಪಾದಪೂಜೆ ಮಾಡಿಸಿಕೊಳ್ಳುವ ಉದ್ಧಟತನ ಮಾಡಲಾರೆ...." ಎಂದರು.

"ನಿಮಿತ್ತ ಮಾತ್ರವಾಗಿ ಗುರುವಾಗಿರುವ ನಾನು, ನಿಮ್ಮನ್ನು ಕೇವಲ ಶಿಷ್ಯಳೆಂದು ಅರಿಯದೆ ಅಕ್ಕಮಹಾದೇವಿಯ ಸಾಕಾರ ಎಂದು ನಂಬಿರುವೆ. ಆದುದರಿಂದ ನಾನು ನಿಮ್ಮ ಮಗನೇ ಸರಿ. ತಾವು ಪಾದೋದಕ ನೀಡಿದರೆ ಅದು ಉದ್ಧಟತನವಾಗದು, ಔದಾರ್ಯವಾಗುವುದು."

ತಾಯಿಯವರ ಒಪ್ಪಿಗೆ ಪಡೆದು, ನಾನು ಗುರುವೆಂಬ ಭಾವವನ್ನು ಮರೆತು, ಮುಗ್ಧ ಶಿಶುವಾಗಿ ಅವರ ಪಾದ ಪೂಜೆ ಮಾಡಿ, ಪಾದೋದಕ ಪ್ರಸಾದ ಸ್ವೀಕರಿಸಿದೆ. ತಾಯಿಯಾಗಿ ನೀವು ಸದಾವಕಾಲ ನನ್ನನ್ನು ರಕ್ಷಿಸಬೇಕೆಂದು ಕೇಳಿಕೊಂಡೆ. "ನಾನು ಇಲ್ಲಿಯವರೆಗೆ ಅಧ್ಯಾತ್ಮ ತಾಯಿಯಿಲ್ಲದೆ ತಬ್ಬಲಿಯಾಗಿದ್ದೆ. ಇಂದಿನಿಂದ ನಾನು ಲೋಕದ ದೃಷ್ಟಿಯಿಂದ ದೀಕ್ಷೆ ನೀಡಿದ ಗುರುವಾದರೂ ಅಂತರಂಗದಲ್ಲಿ ನಿಮ್ಮ ನೆಚ್ಚಿನ ಮಗು ಎಂಬುದನ್ನು ಎಂದೂ ಮರೆಯಬಾರದು. ಕಾರುಣ್ಯದ ಹಾಲನ್ನು ಕುಡಿಸಿ ಈ ಮಗುವನ್ನು ಮಹಂತನನ್ನಾಗಿ ಮಾಡಬೇಕು." ಎಂದು ಮಾತಾಜಿಯವರಲ್ಲಿ ಕೇಳಿಕೊಂಡೆ. ನಮ್ಮ ತಾಯಿ -ಮಕ್ಕಳ ಪವಿತ್ರ ಸಂಬಂಧಕ್ಕೆ ಎಂದೂ ಚ್ಯುತಿ ಬರ ಬಾರದೆಂದು ಉಭಯತರು ಪ್ರತಿಜ್ಞಾಬದ್ಧರಾದೆವು.

ದೀಕ್ಷಾನಂತರ ಗುರುಗಳು ಹೇಳಿದರು, "ನಿಮ್ಮ ಹುಟ್ಟು ಹೆಸರು 'ರತ್ನ.' ಇಂದು ನೀವು ಪುನರ್ಜಾತರಾದಿರಿ. ಮಾಂಸಪಿಂಡವಳಿದು ಮಂತ್ರಪಿಂಡವಾಯಿತು. ನರಜನ್ಮ ಕಳೆದು ಹರಜನ್ಮ ಒದಗಿತು. ಹೊಸ ಹೆಸರಿಡಬೇಕು ಸೂಚಿಸಿರಿ."

ಕಾಶ್ಮೀರದ ದಾರ್ಶನಿಕಳಾದ ಲಲ್ಲೇಶ್ವರಿಯ ಬಗ್ಗೆ ನನಗೆ ಅಭಿಮಾನವಿತ್ತು, ಸೂಚಿಸಿದೆ. "ಅದು ಶರಣ ಸಂಸ್ಕೃತಿಯದಲ್ಲ ನೀವು ಅಕ್ಕಮಹಾದೇವಿಯ ಪ್ರತಿರೂಪವಾಗಬೇಕು. ಅಕ್ಕನ ಅನುಗ್ರಹ ಪಡೆಯಬೇಕು. ಆದ್ದರಿಂದ ನನ್ನ ಆರಾಧ್ಯ ದೇವತೆ ಅಕ್ಕಮಹಾದೇವಿಯ ಹೆಸರನ್ನು ಇಡುವೆ. 'ಮಹಾದೇವಿ' ಎಂದು. ನೀವು ನನಗೆ 'ಮಾತೆ'ಯಾಗಿ ಮುನ್ನಡೆಸಬೇಕು. ಇಂದಿನಿಂದ ನೀವು 'ಮಾತೆ ಮಹಾದೇವಿ" ಎಂದು ಪೂಜ್ಯ ಗುರುಗಳು ಆದೇಶಿಸಿದರು.

"ನೀವು ಧೈರ್ಯಗೆಡಬೇಡಿರಿ. ಗುರಿಯು ಅಚಲವಾಗಿರಲಿ, ಆದಿ ಶರಣರ ಸಂಕಲ್ಪ ಪೂರೈಸಲಿಕ್ಕೆ ಬಂದಿರುವಿರಿ."

"ಇಲ್ಲ, ನಾನೊಬ್ಬ ಸಾಮಾನ್ಯ ಮಹಿಳೆ..." ನಾನಂದೆ.

"ನಾನು ಸಾವಿರಾರು ಭಕ್ತರನ್ನು, ನೂರಾರು ಸಾಧಕನ್ನು ಕಂಡಿದ್ದೇನೆ. ಆದರೆ ನಿಮ್ಮ ಹಂಬಲ, ಚಿಂತನೆಯ ಮಟ್ಟ, ದೈವಿಶಕ್ತಿಯನ್ನು ಗುರುತಿಸಲಿಲ್ಲ. ನೀವು ಸಾಮಾನ್ಯರಲ್ಲ; ಬಸವಾದಿ ಪ್ರಮಥರ ಆಶೋತ್ತರ ಪೂರೈಸಲು ಬಂದವರು. ಅಕ್ಕಮಹಾದೇವಿಯ ಈ ಫೋಟೋ ನನಗೆ ಅಚ್ಚುಮೆಚ್ಚು. ಇದನ್ನೇ ನಿಮಗೆ ಆಶೀರ್ವದಿಸಿ ಕೊಡುತ್ತೇನೆ. ಅಕ್ಕಮಹಾದೇವಿಯ ಅನುಗ್ರಹ ನಿಮಗಾಗಲಿ, ಪಡೆದುಕೊಳ್ಳಿರಿ." ಎಂದು ಪೂಜಾಗೃಹದಲ್ಲಿಟ್ಟಿದ್ದ ಭಾವಚಿತ್ರಕ್ಕೆ ವಿಭೂತಿ ಹಚ್ಚಿ ಆಶೀರ್ವದಿಸಿ ಕೊಟ್ಟರು. ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಅಮೂಲ್ಯವಾದ ಆಸ್ತಿ ಎಂಬ ಭಾವನೆಯಿಂದ ಅದನ್ನು ಎದೆಗೆ ಅಪ್ಪಿಕೊಂಡೆ.

ದೀಕ್ಷೆ, ಉಪಾಹಾರವಾದ ಸ್ವಲ್ಪ ಹೊತ್ತಿನಲ್ಲೇ ನಮ್ಮ ತಾತಂದಿರು ಬಂದರು, ನಾನು ಮರು ಮಾತನಾಡದೆ ಅವರೊಡನೆ ಕಾರಿನಲ್ಲಿ ಕುಳಿತೆ. ಎಲ್ಲರನ್ನೂ ಕಳಿಸಲು ಗುರುಗಳೂ ಮಠದಿಂದ ಹೊರಬಂದರು. ಅವರ ಕಣ್ಣಲ್ಲಿ ಕಳವಳ ತುಂಬಿತ್ತು, ಅಧ್ಯಾತ್ಮಿಕ ಪ್ರೇರಣೆ ಬರುವುದೇ ಲಕ್ಷಕ್ಕೊಬ್ಬರಿಗೆ. ಅದರಲ್ಲೂ ವೈರಾಗ್ಯ ಹಾದಿ ಹಿಡಿಯುವವರು ಇನ್ನೂ ಕಡಿಮೆ. ಹಾಗೆ ಬಂದವರಿಗೆ ಪ್ರೇರಣೆ, ಪ್ರೋತ್ಸಾಹ ನೀಡುವುದು ಬಿಟ್ಟು ಕಾಲೆಳೆಯುವವರೇ ಬಹಳ. ಮೊದಲನೆಯ ವಿಘ್ನ ಮನೆಯವರಿಂದ, ಎರಡನೆಯದು ಬಂಧು ಬಾಂಧವರಿಂದ, ಮೂರನೆಯದು ಸಮಾಜದಿಂದ. ಎಲ್ಲ ಎಡರು ತೊಡರು ದಾಟಿ ಒಂದು ವ್ಯಕ್ತಿ ವ್ಯಕ್ತಿತ್ವ ಬೆಳೆಸಿಕೊಳ್ಳುವುದು ಹುಡುಗಾಟವೇನಲ್ಲ ಎಂಬ ನಿರಾಶಾಭಾವ ಗುರುಗಳನ್ನು ಕಾಡಿರಲೂಬಹುದು.

ದೀಕ್ಷಾನಂತರ ನನ್ನಲ್ಲೂ ವಚನಗಳು ಸ್ಫುರಿಸತೊಡಗಿದ್ದವು. ಒಂದು ಗಿಡದ ಕೆಳಗೆ ಕುಳಿತು ಎರಡು ವಚನಗಳನ್ನು ಬರೆದು ಗುರುಗಳ ಬಳಿಗೆ ಹೋದೆ. "ಉಳಿದ ಜನರು ತಮ್ಮ ಕೈಲಾದಷ್ಟು ಕಾಣಿಕೆಯನ್ನು ತಮ್ಮ ಶ್ರೀಪಾದಕ್ಕೆ ಸಲ್ಲಿಸಬಹುದು. ನನ್ನಲ್ಲಿ ಏನಿಲ್ಲ. ಈ ವಚನಗಳೇ ತಮಗೆ ಅರ್ಪಿಸುವ ಗುರು ಕಾಣಿಕೆ" ಎಂದು ಎರಡು ವಚನಗಳನ್ನು ಗುರುಗಳಿಗೆ ಸಲ್ಲಿಸಿದ್ದೆ. ಮನೆಗೆ ಬಂದ ನಂತರ ಮೌನ ತಾಳಿದೆ. ಯಾರೊಡನೆಯೂ ಹೆಚ್ಚು ಮಾತನಾಡದೆ ಪೂಜೆ -ಧ್ಯಾನ- ಅಧ್ಯಯನ -ಬರವಣಿಗೆಯಲ್ಲಿ ತೊಡಗಿದೆ. ಪುಂಖಾನುಪುಂಖವಾಗಿ ವಚನಗಳು, ಕವನಗಳು, ಭಾವಗೀತೆಗಳು ಲೇಖನಿಯಿಂದ ಹೊರಹೊಮ್ಮ ತೊಡಗಿದವು. ದಿನನಿತ್ಯ ಬರೆದವನ್ನು ಪೂಜ್ಯ ಗುರುಗಳಿಗೆ

ಅಂಚೆಯಲ್ಲಿ ಕಳಿಸುತ್ತಿದ್ದೆ.

ಮೈಸೂರಿನಲ್ಲಿ ಪೂಜ್ಯರ ಪ್ರವಚನ ಪ್ರಾರಂಭವಾಯಿತು. ಮೊದಲು ಸುತ್ತೂರು ಮಠದಲ್ಲಿ ನಂತರ ರೇಣುಕ ಮಂದಿರ, ಆಮೇಲೆ ಸಂತೇಪೇಟೆ, ವೀರನಗೆರೆ, ಕೆಸರೆ. ಪೂಜ್ಯ ಸುತ್ತೂರು ಜಗದ್ಗುರುಗಳು ರಾಮಾನುಜ ರಸ್ತೆಯಲ್ಲಿ ನಿರಂಜನಾಲಯ ಎಂಬ ಕಟ್ಟಡವನ್ನು ಕೊಟ್ಟಿದ್ದರು. ಸಂತೇಪೇಟೆಯಲ್ಲಾದ ಪ್ರವಚನದ ಪ್ರಭಾವವನ್ನು ಇಂದಿಗೂ ಮೈಸೂರಿನಲ್ಲಿ ಹಿರಿಯತಲೆಗಳು ಬಗೆಬಗೆಯಾಗಿ ಬಣ್ಣಿಸುತ್ತಾರೆ. "ಮುಖ್ಯರಸ್ತೆಯಲ್ಲಿ ಪ್ರವಚನ, ಪೇಟೆ ಸ್ಥಗಿತಗೊಳ್ಳುತ್ತಿತ್ತು" ಎಂದು ಜ್ಞಾಪಿಸಿಕೊಳ್ಳುತ್ತಾರೆ.

ನಾನು ಪತ್ರದಲ್ಲಿ ಬರೆದು ಕಳಿಸಿದ ವಚನಗಳನ್ನೆಲ್ಲ ಸಂಗ್ರಹಿಸಿ ಪೂಜ್ಯ ಗುರುಗಳು "ಮಾತೃವಾಣಿ", "ವಿರಹ ತರಂಗ" ಎಂಬ ಎರಡು ಕೃತಿಗಳನ್ನು ಪ್ರಕಟಿಸಿಯೇ ಬಿಟ್ಟಿದ್ದು ನನಗೆ ಗೊತ್ತೇ ಇರಲಿಲ್ಲ. ನಾನು ಮನೆಗೆ ಹಿಂತಿರುಗಿದ ನಂತರ ತೀವ್ರ ತಪಸ್ಸಿನಲ್ಲಿ ತೊಡಗಿದೆ. ಸಾಧಕರ ಜೀವನದ ಕಾಳರಾತ್ರಿ", Dark night of the Soul ಎಂಬ ಸ್ಥಿತಿ ಬಂದೊದಗಿತ್ತು. ಲಿಂಗಪತಿಗಾಗಿ ಶರಣ ಸತಿಯಾಗಿ ಹಂಬಲಿಸುವ ಉತ್ಕಟ ವೇದನೆ. (ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಅಕ್ಕನ ಪ್ರವಚನದಲ್ಲಿ ಹರನ ಹಂಬಲ ಎಂಬ ವಿಷಯವನ್ನು ತುಂಬಾ ಚೆನ್ನಾಗಿ ಪ್ರತಿಪಾದಿಸಿ ಶರಣರು ಹೇಗೆ ಆ ಮನಃಸ್ಥಿತಿಯನ್ನು ವಚನಗಳ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ ಎಂಬುದನ್ನು ಚಿತ್ರಿಸಿದ್ದಾರೆ)

ಷಟಸ್ಥಲಗಳು ಸಾಧಕನು ಮಾನಸಿಕವಾಗಿ ಹೇಗೆ ಅಧ್ಯಾತ್ಮಿಕ ಜಗತ್ತಿನಲ್ಲಿ ಮೇಲೇರುವನು ಎಂಬುದನ್ನು ಚಿತ್ರಿಸುತ್ತವೆ. ಲಿಂಗಾಯತ ಧರ್ಮ ಅನುಭಾವಿಕ ಧರ್ಮ. ತೆಂಗಿನ ಗಿಡ ಕೆಳಗಿನ ಗರಿಗಳನ್ನು ಕಳಚುತ್ತಾ ಮೇಲಮೇಲಕ್ಕೆ ಸುಳಿದೆಗೆದು ಬೆಳೆಯುತ್ತ ಹೋಗುವಂತೆ ಸಾಧಕನ ಮನಸ್ಸು ಮೇಲೇರುವುದು. ಷಟಸ್ಥಲವು ಭಕ್ತಸ್ಥಲದಿಂದ ಆರಂಭವಾಗುವುದಾದರೂ ಪೂರ್ವ ಸಿದ್ಧತಾ ಸ್ಥಲಗಳು ಅಂದರೆ ಪಿಂಡಸ್ಥಲ, ಪಿಂಡಜ್ಞಾನ ಸ್ಥಲ ಮುಂತಾದವು.

ಜೀವಾತ್ಮವು ಅನಂತ ಜನ್ಮಗಳಲ್ಲಿ ತಿರುಗುತ್ತಾ, ಸುಖ ಭೋಗಗಳಲ್ಲಿ ತಲ್ಲೀನವಾಗಿರುತ್ತದೆ. ಒಂದಾನೊಂದು ದಿನ ಯಾರಾದರೊಬ್ಬ ಗುರುವಿನ ದರ್ಶನದಿಂದಲೋ, ವಾಣಿಯಿಂದಲೋ, ಘಟನೆಯಿಂದಲೋ ಎಚ್ಚರಗೊಳ್ಳುತ್ತದೆ. ಇಲ್ಲಿಯವರೆಗೂ ಸುಖಾನಂದದಲ್ಲೇ ತಲ್ಲೀನವಾಗಿದ್ದ ಮನ-ಬುದ್ಧಿಗಳು ನಾನಾರು? ಎಂದು ಕೇಳತೊಡಗುತ್ತವೆ. ನಾನೆಂದರೆ ಕೇವಲ ಕೈ ಕಾಲು ಕಣ್ಣು ಮೂಗು, ಬಾಯಿ ಇರುವ ಶರೀರವಲ್ಲ; ನಾನೆಂದರೆ ಈ ಶರೀರ ಎಂಬ ಯಂತ್ರವನ್ನು ಆಡಿಸುವ ಸೂತ್ರಧಾರ ಆತ್ಮ ಎಂಬ ಅರಿವು ಮೂಡುವುದು. ಇದೇ ಪಿಂಡ ಸ್ಥಲ. ಪಿಂಡ ಎಂದರೆ ಇಲ್ಲಿ ಆತ್ಮ ಎಂದು ಅರ್ಥಮಾಡಬೇಕು. ನಾನೆಂದರೆ ಆತ್ಮ; ಹಾಗಾದರೆ, ಈ ಆತ್ಮನಿಗೂ ಬ್ರಹ್ಮಾಂಡವನ್ನು ಆಡಿಸುವ ಮಹಾಚೈತನ್ಯ ಪರಮ ಆತ್ಮನಿಗೂ ಸಂಬಂಧವೇನು? ಈ ಆತ್ಮವು ಒಂದು ಕಿಡಿ, ಪರಮಾತ್ಮ ಒಂದು ಜ್ವಾಲೆ. ಜೀವಾತ್ಮ ಒಂದು ಹನಿ ಪರಮಾತ್ಮ ಒಂದು ಸಮುದ್ರದಂತೆ. ಸ್ವರೂಪದಲ್ಲಿ ಎರಡೂ ಒಂದೆ ಗಾತ್ರದಲ್ಲಿ ಬೇರೆ ಬೇರೆ. ಈ ಅರಿವನ್ನು ಪಡೆದುದೇ ಪಿಂಡಜ್ಞಾನ ಸ್ಥಲ. ತಾನು ಆತ್ಮ ಪರಮಾತ್ಮ ಎಂಬ ಸಿಂಧುವಿನ ಒಂದು ಬಿಂದು ಎಂಬ ಅರಿವು ಮೂಡುತ್ತಲೇ ತನ್ನ ಮೂಲವನ್ನು ಸೇರುವುದು ಹೇಗೆ? ಎಂಬ ಚಿಂತನೆ ಶುರುವಾಗುವುದು. ಆಗ ಲೌಕಿಕ

ಜಗತ್ತಿನ ಚಟುವಟಿಕೆ ಕಮ್ಮಿಯಾಗುತ್ತವೆ. ಮನಸ್ಸು ಅಂತರ್ಮುಖಿಯಾಗುತ್ತದೆ. ಲೌಕಿಕ ಸುಖಗಳಲ್ಲಿ ಆಸಕ್ತಿ ಕುಂದುತ್ತದೆ. ಇದೇ ಸಂಸಾರ ಹೇಯಸ್ಥಲದಲ್ಲಿ ಪೂರ್ವಾರ್ಧ, ಉತ್ತರಾರ್ಧ ಎಂಬ ಎರಡು ಹಂತಗಳನ್ನು ಗುರುತಿಸಬಹುದು. ಪೂರ್ವಾರ್ಧದಲ್ಲಿ ಸಂಸಾರವು ಎಷ್ಟು ಭಯಂಕರ! ಲೋಕ ಲೌಕಿಕದ ಸುಳಿಯು ಹೇಗೆ ಈ ಜೀವಾತ್ಮವು ಪಂಚೇಂದ್ರಿಯ, ಷಡ್ವರ್ಗ, ಸಪ್ತವ್ಯಸನ ಎಂಬ ಹುಲಿಯ ಬಾಯಿಂದ ಸಂಸಾರ ಹೇಯ ಸ್ಥಲದ ಪೂರ್ವಾರ್ಧದಲ್ಲಿ ಪಾರಾದರೂ ಗುರು ಕಾರುಣ್ಯ ಎಂಬ ನೀರು ಪಡೆಯದಿದ್ದರೆ ಉಳಿಯದು. ಆಂತರಿಕ ಹಂಬಲಕ್ಕೆ ತಕ್ಕಂತೆ ಗುರುವಿನ ದರ್ಶನ, ಅನುಗ್ರಹ ಪ್ರಾಪ್ತಿಯಾಗುತ್ತದೆ. ಗುರುವು ವಿಭೂತಿ ಧರಿಸಿ, ರುದ್ರಾಕ್ಷಿ ಹಾಕಿ, ಇಷ್ಟಲಿಂಗ ಕೊಟ್ಟು ಷಡಕ್ಷರಿ ಮಂತ್ರೋಪದೇಶ ಮಾಡುತ್ತಾನೆ. ಈಗ ಸಾಧಕನು ಭಕ್ತನಾಗುತ್ತಾನೆ. ಷಟಸ್ಥಲದ ಮೊದಲ ಮೆಟ್ಟಿಲು ಭಕ್ತನ ಭಕ್ತ ಇದಕ್ಕೆ ಕಾಲಿಡುತ್ತಾನೆ. ಇಲ್ಲಿಂದ ಜೀವದ ಯಾತ್ರೆಯು ಆರಂಭವಾಗುತ್ತದೆ. ಆಗ ದೇವನಿಗಾಗಿ ಹಂಬಲವು ಶುರುವಾಗುತ್ತದೆ. ಇದನ್ನು ಲಿಂಗವಿಕಳಾವಸ್ಥೆ ಎನ್ನಲಾಗುವುದು. ಗುರುವು ಲಿಂಗಪತಿಯೊಡನೆ ಮದುವೆ (ದೀಕ್ಷೆ) ಯನ್ನೇನೋ ಮಾಡಿದ ಆದರೆ ಮಧುಚಂದ್ರವೇ ಆಗಲಿಲ್ಲ. ನೀನು ಕೈಗೆ ಏಕೆ ಸಿಗುತ್ತಿಲ್ಲ. ಎಂಬ ವೇದನೆಯನ್ನು ಸಾಧಕನು ಅಕ್ಷರಶಃ ಅನುಭವಿಸುತ್ತಾನೆ.

ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು.
ಇರುಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆತಲ್ಲಿಪ್ಪೆನು
ಹಗಲಿರುಳು ನಿಮ್ಮ ಹಂಬಲದಲ್ಲಿ ಮೈಮರೆದೊರಗಿಪ್ಪೆನು
ಚನ್ನಮಲ್ಲಿಕಾರ್ಜುನ
ನಿಮ್ಮ ಒಲುಮೆನೆಟ್ಟು,
ಹಸಿವು ತೃಷೆ ನಿದ್ರೆಯ ತೊರೆದೆನಯ್ಯಾ.

ಈ ಎಲ್ಲ ಅನುಭವವನ್ನು ಅಕ್ಷರಶಃ ಪಡೆಯುತ್ತಿದ್ದೆ. ಇಂದು ಹೊರನಿಂತು ವಿಮರ್ಶೆ ಬರೆಯುತ್ತಿದ್ದೇನೆ. ಆ ಮಧುರಾ ಭಕ್ತಿಯ ಅನುಭವ, ಲಿಂಗಪತಿಯ ವಿರಹ ವೇದನೆ ಅದೆಲ್ಲ ಒಂದು ಅವಸ್ಥೆ. ಪುನಃ ಅದು ಬರಲು ಸಾಧ್ಯವಿಲ್ಲ. ಏಕೆಂದರೆ ಆ ಹಂತವನ್ನು ದಾಟಿರುತ್ತೇವೆ. ಮಾತೃವಾಣಿ, ವಿರಹ ತರಂಗ ಕೃತಿಗಳಲ್ಲಿ ಈ ಮಧುರಾ (ಸಖಿ) ಭಕ್ತಿ ಚೆಲ್ಲವರಿದಿದೆ. ಬಹಿರಂಗ ಜಗತ್ತಿನ ಪರಿವೆ ಇಲ್ಲದೆ ಹಗಲು ಇರುಳು ಅಂತರ್ಮುಖಿಯಾಗಿ ಪೂಜೆ-ಧ್ಯಾನಗಳಲ್ಲಿ ತೊಡಗಿದೆ. ಅಧ್ಯಯನ, ವಚನ ರಚನೆ ವೇಗದಿಂದ ಸಾಗಿತ್ತು. ಪೂಜ್ಯ ಅಪ್ಪಾಜಿ ಮಠದಿಂದ ನಾನು ಹೊರಡುವಾಗ "ಅಕ್ಕಮಹಾದೇವಿಯ ಅನುಗ್ರಹ ಗಳಿಸಿಕೊಳ್ಳಿರಿ" ಎಂದು ಹೇಳಿದ ಮಾತು ರಿಂಗಣಗುಣಿಸುತ್ತಿತ್ತು. ಅಕ್ಕನ ಅನುಗ್ರಹ ಪಡೆಯಲೇಬೇಕೆಂಬ ಹಂಬಲ ತುಂಬಿ ನಿಂತಿತ್ತು.

"ಅಕ್ಕಾ, ನನ್ನಲ್ಲಿ ಅವತರಿಸಿ ಪುನೀತಳನ್ನಾಗಿ ಮಾಡು" ಎಂದು ತಪಗೈದೆ. ಒಂದು ದಿನ ಅಂಧಕಾರದ ಮಡಿಲಲ್ಲಿ ಜಗತ್ತೆಲ್ಲ ನಿದ್ರಿಸುತ್ತಿದೆ. ನನ್ನ ಸೂಕ್ಷ್ಮ ಶರೀರ ಜಾಗೃತವಾಗಿದೆ. ನನ್ನ ಕೋಣೆಯಲ್ಲಿ ಒಂದೆಡೆ ಧ್ಯಾನಯೋಗಿ ಶಿವನ ಮತ್ತು ಅಕ್ಕನ ಫೋಟೋ ಜೊತೆಗೆ ಇಟ್ಟಿದ್ದೆ. ಅಂದು ಇದ್ದಕ್ಕಿದ್ದಂತೆಯೆ ಜೋರಾಗಿ ನಗೆಯ ತರಂಗಗಳು ಬಂದು ಕರ್ಣಾಂಗವನ್ನು ತಗುಲ ತೊಡಗಿವೆ. ಕಣ್ಣುಬಿಟ್ಟುಕೊಂಡೇ ಇದ್ದೇನೆ. ಭವ್ಯ ರಜತಗಿರಿ, ದಿವ್ಯವಾದ ತಿಂಗಳ ಬೆಳಕಿನಿಂದ

ಆಚ್ಛಾದಿಸಲ್ಪಟ್ಟು ಶುಭ್ರ ಶ್ವೇತಾಂಬರಿಯಂತೆ ಕಂಗೊಳಿಸುತ್ತಿದೆ. ಆಗ ದೂರದಲ್ಲಿ ಸ್ತ್ರೀ- ಪುರುಷ -ರಿಬ್ಬರ ವಿಹಾರ ಸಮಯದ ನಗುವು ತರಂಗ ಮಾಲಿಕೆಯೊಲು ಹರಿದು ಹೊನಲಾಗಿ ದೂರದಲ್ಲಿ ನಿಂತ ನನಗೆ ಬಡಿಯುತ್ತಿದ್ದೆ, ಪತಿ-ಪತ್ನಿಯರ ಸರಸ ಸಲ್ಲಾಪದ ದನಿಯಿಂದ ಅದು ಅಕ್ಕಮಹಾದೇವಿ - ಶಿವನದೆಂದು ತಿಳಿದು ಭಯಭಕ್ತಿಯಿಂದ ನಾನು ಬೇಡಿಕೊಳ್ಳುತ್ತಿದ್ದೇನೆ. "ಅಕ್ಕಾ, ಅಧ್ಯಾತ್ಮ ಪಥದಲ್ಲಿ ಅಂಬೆಗಾಲಿಕ್ಕುತ್ತಿರುವೆ. ನನ್ನಲ್ಲಿ ಆವಿರ್ಭವಿಸು, ನನಗೆ ದಿವ್ಯಶಕ್ತಿ ಬಂದೀತು. ನಿನ್ನ ಕಾರುಣ್ಯ ಬಲದಿಂದ ನನಗೆ ಅಸೀಮ ಬಲವನ್ನು ಕೊಡು." ಆಗ ಶಿವನು ನುಡಿದನು,"ಹೋಗ್ದೇವಿ, ಅವತರಿಸು ಈ ಅಭಿನವ ತಂಗಿಯಲ್ಲಿ". "ನಿಮ್ಮನ್ನುಳಿದು ನಾ ಹೋಗಲೇ? ಅದೆನಿತು ಕಷ್ಟಪಟ್ಟೆ ನಿಮಗಾಗಿ ಹಂಬಲಿಸಿ" - ನಗುತ್ತ ಕೋಕಿಲ ದನಿಯಲ್ಲಿ ಅಕ್ಕ ನುಡಿದಳು. "ದೇವೀ, ಅಲ್ಲಿ ಇಲ್ಲಿ ಎಂಬ ಭಿನ್ನತೆ ಏಕೆ? ಆಕೆಯಲ್ಲೂ ನಾನಿರುವೆ." ಆಕೆ ನಿರಾಕಾರಿಸಿದ್ದರಿಂದ ಪೆಚ್ಚಾಗಿ ನಿಂತಿದ್ದ ನಾನು ಅಂದೆ: "ಹೌದಕ್ಕಾ...ನನ್ನಲ್ಲೂ ಶಿವನಿದ್ದಾನೆ. ನೀನು ನನ್ನಲ್ಲಿ ಕೂಡಿದರೆ ನಮ್ಮಿಬ್ಬರ ಅಧ್ಯಾತ್ಮ ಬಲದಿಂದ ಬೇಗನೆ ಶಿವನ ಬೆರೆಯುಬಹುದು; ಆ ನಿನ್ನಪತಿ ಚನ್ನನೇ ಮಹಾದೇವಿ ಪ್ರಿಯ ಸಚ್ಚಿದಾನಂದನವ್ವಾ!" ಆಗ ಆಕೆಗೂ ಸಮಂಜಸವೆನಿಸಿತೇನೋ "ನಾನು ನಿನ್ನಲ್ಲಿ ಆವಿರ್ಭವಿಸಿದರೆ ತಡೆದುಕೊಳ್ಳುವ ಶಕ್ತಿ ಇದೆಯೇ?" ಎಂದು ಪಡಿನುಡಿದಳು. "ನೀನೇ ಆ ಶಕ್ತಿಯನ್ನಿತ್ತರೆ ಆಗಲಾರದೇಕೆ?" "ಒಳ್ಳೆಯದು, ಈಗ ಬರಲೇ?....... ಸಿದ್ಧಳಾಗು." ಆಗ ದಿವ್ಯ ಪ್ರಭೆಯೊಂದು ಪ್ರಜ್ವಲಿಸುತ್ತ ಬಂದು ಕಾಯದೊಳಗೆ ಪ್ರವೇಶಿಸಿತು. ನನ್ನಲ್ಲಿ ಅಪೂರ್ವ ಬಲ ಮೈ ಹೊಕ್ಕಂತಾಯಿತು.

"ಅಕ್ಕಾ..... ನೀನು ಬಂದುದಕ್ಕೆ ಕುರುಹೇನು?" "ತಂಗೀ, ಇಂದಿನಿಂದ ನಿನಗೆ ಹಾಡಲು ಬರುವುದು; ಅದುವೇ ಕುರುಹು." ಆಕೆಯ ಶಕ್ತಿ ಅವತರಣವಾಗುವಾಗ ಸರ್ವಾಂಗವೆಲ್ಲ ಕಂಪಿಸುತ್ತಿತ್ತು, ನಿಧಾನವಾಗಿ ನಗುವಿನ ದನಿ ಮಾಯವಾಗಿ ರಜತಗಿರಿಯಲ್ಲಿ ಕರಗಿಹೋಯಿತು. ಆಗ ಥಕ್ಕನೆ ಕಣ್ಣು ತೆರೆದೆ (ಸ್ಥೂಲ ಶರೀರದ ಜಾಗ್ರತಾವಸ್ಥೆ). ಅಂಧಕಾರ ಕವಿದಿದ್ದ ಕೋಣೆಯಲ್ಲಿ ಕುಳಿತುಕೊಂಡಿದ್ದೆ. ಮೈಯಲ್ಲಾ ಬೆವೆತು ಕಂಪಿಸುತ್ತಿದೆ. ಕಣ್ಣು ಮರಳಿ ಮುಚ್ಚಿಕೊಂಡೆ. ಕೆಲವು ಸಮಯದ ನಂತರ ಎದ್ದೆ. ದಿವ್ಯ ಆತ್ಮಬಲ ಬಂದಿತ್ತು. ಸರ್ವಾಂಗವೆಲ್ಲಾ ದೈವೀಕಾರುಣ್ಯದ ಜಲದಲ್ಲಿ ಮಿಂದಂತಿತ್ತು. ಆನಂದದುನ್ಮಾದದಲ್ಲಿ ಬರೆದೆ:

ಅಕ್ಕಯ್ಯ ಕೇಳವ್ವ ನಾ ಕಂಡ ಕನಸ
ದಿವ್ಯ ತಿಂಗಳ ಬೆಳಕು, ರಜತಗಿರಿ ನೀರಪ್ಪಿದೊಲಿರ್ದಿತು
ಅದರೊಳಗೆ ಕೇಳಿ ಬರುತಿರ್ತು ದಂಪತಿಗಳ್ನಿಮ್ಮೀರ್ವರ
ಕೇಲಿಸಮಯದ ನಗುವು, ತರಂಗಮಾಲಿಕೆಯೊಲು
ಅಕ್ಕನವತರಿಸೆಂದು ನಿನ್ನ ನಾ ಕೇಳೆ, ನಿನ್ನ ಪತಿಯುಸುರಿದ;
ಹೋಗ್ದೇವಿ ಅವತರಿಸೀ ಅಭಿನವ ತಂಗಿಯೊಳೆಂದು
ಅದಹೊತ್ತು ನೀ ಬಂದೆ ಎನ್ನ ಹೃದಯ ಮಂದಿರಕೆ,
ನಾದ ಸುಧೆಯನು ತೀವಿ ನುಡಿಸಿ ಜಡವೀಣೆಯ
ಬಂದ ಕುರುಹನು ಕೇಳೆ ಸಂಗೀತವನು ಇತ್ತೆ;
ತಾನಾಗಿ ನುಡಿಸುತ ಸಪ್ತಸ್ವರ ಸಂಗಮವ
ಇಲ್ಲಿಯೂ ನಿನ್ನ ಅವ್ಯಕ್ತ ಪತಿ ಇರ್ಪನು ತಾಯಿ ಅದಕ್ಕೆ ಸಂಶಯವಿಲ್ಲ.

ನನ್ನ ಕಾಯ, ನಿನ್ನ ಜ್ಯೋತಿ ಬಿಚ್ಚಿ ಬೇರಾಗದಂತಿವೆ.
ನನ್ನ ಉಸಿರು ನಿನ್ನ ಪ್ರಾಣ ಒಂದರೊಳಗೊಂದು ಬೆರತಿವೆ.
ನನ್ನ ದೇಹ, ನಿನ್ನ ಚೇತನ ಎರಡು ಕೂಡಿ ಮಹಾದೇವಿ ನಾನವ್ವ:
ಅವ್ಯಕ್ತ ನಿರಾಕಾರಿ ನೀ, ವ್ಯಕ್ತ ಸಾಕಾರದೆನ್ನ ಕಾಯದೊಳು
ಚೈತನ್ಯದಿಂದಿರ್ದು, ಮುನ್ನಡೆಸುತಿರಲು,
ನಿಚ್ಚಯದೆ ಬೆರೆವೆನವ್ವಾ ಸಚ್ಚಿದಾನಂದಾಣ್ಮನಲಿ !

ಈ ಪದ್ಯದ ಒಂದೊಂದು ಪದದಲ್ಲೂ ನನ್ನ ದಿವ್ಯಾನುಭವ ತುಂಬಿ ತುಳುಕುತ್ತಿದೆ. ಅಂದಿನಿಂದ ನನ್ನ ಮನದಲ್ಲಿ ಆತ್ಮವಿಶ್ವಾಸ ಬಲಿಯಿತು. ಇಂತು ಹೇಳಲು ಶಕ್ತಳಾದೆ.

ಒಂದೆ ಒಡಲಿನ ಎರಡು ಕುಡಿಗಳವ್ವಾ ನಾವು
ಅಂದು ನೀನು,ಇಂದು ನಾನು ಚೆನ್ನ - ಸಚ್ಚಿದಾನಂದ ಪತ್ನಿಯರು
ಶರಣ ಕಣ್ಮಣಿಯಾಗಿ ಬೆಳಗಿದೆ ಅಕ್ಕಮಹಾದೇವಿ ಅಂದು
ಧರಣಿಯಲಿರ್ಪ ಮಾನವರ ವಿಶ್ವಬಂಧುವಾಗಿಹೆ
ಅಭಿನವ ಅಕ್ಕಮಹಾದೇವಿ ಇಂದು !
ರೂಪ, ದೇಶ, ಕಾಲ, ಬೇರೆ ಬೇರೆ ಎಂದೆನಿಸಿದರೂ
ಭಾವ, ಮನ, ಒಲವು, ಎಂದಿಗೂ ಒಂದೆಯೇ ॥
ನೀನೆನ್ನ ಅಕ್ಕನು ಹಿರಿಯವಳು ತಾಯೆ
ನಾನಿನ್ನ ತಂಗಿಯು ಕಿರಿಯವಳು ಕಾಯೆ ॥
ಎರಡು ಕಾಲದ ಒಂದೇ ಆವಿರ್ಭಾವವು ತಾಯೆ
ಎಡರುಗಳ ಪರಿಹರಿಸು ಮಹಾ ಸಾತ್ವಿಕ ಮೂರ್ತಿಯೆ ॥
ಅಕ್ಕನೆಂಬೆರಡು ಅಕ್ಕರಗಳಲ್ಲಿ ಅಕ್ಕರೆಯ ಪೊನಲಿಹುದು
ಮಿಕ್ಕೆನ್ನೊಳವತರಿಸು ದೇವಿ, ಚೊಕ್ಕವಾಗುವೆ ನಾನು ॥
ನೀ ನಡೆದ ಪಥ ದಿವ್ಯ ಆದರ್ಶಪಥವೆನಗೆ
ನಿನ್ನ ಪತಿ 'ಚೆನ್ನನು' ಇಂದು ಮಹಾದೇವಿ
ಪ್ರಿಯ ಸಚ್ಚಿದಾನಂದನವ್ವಾ ॥

ಹೀಗೆ ಅಕ್ಕನು ಈ ಕೊರಡನ್ನು ಕೊನರಿಸಿದಳು; ತನ್ನ ಅವತರಣದಿಂದ ಬರಡು ಹೃದಯಕ್ಕೆ ದಿವ್ಯ ಗುರುಶಿಶುವನ್ನಿತ್ತು ಹಯನಿಸಿದಳು; ಬಾಳಿಗೊಂದು ರೂಪವನ್ನಿತ್ತಳು. ಕಾಲಕಾಲಕ್ಕೆ ಧೈರ್ಯ ತುಂಬುವಳು."

(ಮುಂದುವರೆಯುವುದು...)

ವಧು - ವರಾನ್ವೇಷಣ ವಿಭಾಗ

ಕಲ್ಯಾಣ ಕಿರಣದ 2012ರ ಜನವರಿ ಸಂಚಿಕೆಯಿಂದ ವಧುವರಾನ್ವೇಷಣ ವಿಭಾಗವನ್ನು ಪ್ರಕಟಿಸುತ್ತಿರುವುದರಿಂದ ವಧು ವರ ಬೇಕಾದವರು ವಿವರಗಳನ್ನು, ತಮ್ಮ ಅಗತ್ಯವನ್ನು ತಿಳಿಸಬಹುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ:
ಚಂದ್ರಮೌಳಿ ಎಮ್ಮಿಗನೂರು - 9448466805

****

“ಶರಣ ಸಂಗಮ”

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ 2012 ರ ಜನವರಿ 11ರಿಂದ 15ರವರೆಗೆ ನಡೆಯಲಿರುವ 25ನೆಯ ಶರಣಮೇಳ ಬೆಳ್ಳಿಹಬ್ಬದ ಸಂಸ್ಮರಣೆಗಾಗಿ ಹೊರ ತರುತ್ತಿರುವ “ಶರಣ ಸಂಗಮ” ಸ್ಮರಣ ಸಂಚಿಕೆಯ ಜಾಹೀರಾತು ದರಪಟ್ಟಿ, ಅಳತೆ 1/4 ಡೆಮ್ಮಿ.

ಹೊದ್ದಿಕೆಯ 4ನೆಯ ಪುಟ (ಬಹುವರ್ಣೀಯ)
------ 30,000.ರೂ.ಗಳು

ಹೊದ್ದಿಕೆಯ 2ನೆಯ ಪುಟ (ಬಹುವರ್ಣೀಯ)
------ 25,000.ರೂ.ಗಳು

ಹೊದ್ದಿಕೆಯ 3ನೆಯ ಪುಟ (ಬಹುವರ್ಣೀಯ)
------ 20,000.ರೂ.ಗಳು

ಒಳಪುಟ (ಬಹುವರ್ಣೀಯ) ------ 10,000.ರೂ.ಗಳು

ಅರ್ಧಪುಟ(ಬಹುವರ್ಣೀಯ) ------ 6,000.ರೂ.ಗಳು

ಒಳಪುಟ (ಏಕವರ್ಣೀಯ) ------- 8,000.ರೂ.ಗಳು

ಅರ್ಧಪುಟ (ಏಕವರ್ಣೀಯ) ------ 5,000.ರೂ.ಗಳು

ಚೆಕ್ಕು/ಡಿ.ಡಿ ಕಳಿಸುವವರು “ಶರಣ ಮೇಳ ಉತ್ಸವ ಸಮಿತಿ”, ಬೆಂಗಳೂರು, Sharana Mela Utsava Samithi,Bengaluru ಎಂದು ಬರೆಯ ಬೇಕು.

ವರ್ಣರಂಜಿತವಾಗಿ, ಉತ್ತಮ ಲೇಖನಗಳಿಂದ ಕೂಡಿ, ಕಾಯ್ದಿಡುವ ಸಂಚಿಕೆಯಾಗಿ ಹೊರಬರುವ “ಶರಣ ಸಂಗಮ”ಸ್ಮರಣ ಸಂಚಿಕೆಗೆ ಜಾಹೀರಾತು ನೀಡಿ ಸಹಕರಿಸಿರಿ.

ವ್ಯವಹರಿಸುವ ವಿಳಾಸ:

ಶರಣ ಮೇಳ ಉತ್ಸವ ಸಮಿತಿ
ಬಸವ ಮಂಟಪ, 2035,
20ನೇ ಮೇನ್, 2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010.

ದೂರವಾಣಿ ಸಂಖ್ಯೆ: 9945255525, 9663385657



ದಿ. 11-11-2011 ಸಂಜೆ ನಡೆದ ಧಾರ್ಮಿಕ ಸಭೆ



ದಿ. 13-11-2011 ಶಿವಮೊಗ್ಗ ರಾಷ್ಟ್ರೀಯ ಬಸವ ದಳದಿಂದ ಶರಣ ಮೇಳ ಪ್ರಚಾರ ಸಭೆ ಸಂಸತ್ ಸದಸ್ಯ ಆಯನೂರು ಮಂಜುನಾಥ ಅವರಿಂದ ಉದ್ಘಾಟನೆ.



ಆಯನೂರು ಮಂಜುನಾಥ ಅವರಿಂದ ಉಪನ್ಯಾಸ ವೇದಿಕೆಯ ಮೇಲೆ ರಾಷ್ಟ್ರೀಯ ಬಸವ ದಳದಧ್ಯಕ್ಷ ರಾಮಣ್ಣನವರು, ಹಾಲಪ್ಪನವರು, ಪೂಜ್ಯ ಮಾತಾಜಿ, ಮಲ್ಲಪ್ಪನವರು, ಲಿಂಗಾಯತ ಧರ್ಮಮಹಾಸಭಾ ಅಧ್ಯಕ್ಷ ಕೆ.ಬಸವರಾಜು



ಧಾರವಾಡದಲ್ಲಿ ದಿ 1–12–2011 ರಂದು ನಡೆದ ಪೂಜ್ಯ
ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಶರಣ ಮೇಳ ಪ್ರಚಾರ
ಸಭೆಯ ಉದ್ಘಾಟನೆ ಶರಣ ಜಿ.ಜಿ. ದೊಡ್ಡವಾಡ ಅವರಿಂದ



ರಾಜ್ಯ ಪ್ರಶಸ್ತಿ ವಿಜೇತ ಮೋಹನ ನಾಗಮ್ಮನವರು ಅವರಿಗೆ
ಧಾರವಾಡ ರಾಷ್ಟ್ರೀಯ ಬಸವ ದಳದಿಂದ ಸತ್ಕಾರ

CPMG/KA/BGW/50/2009-2011, RNI 19980/70, POSTED AT MBC BANGALORE GPO ON 3,10,20 OF EVERY MONTH. LICENCED TO POST WITHOUT PRE PAYMENT WPP-17, PAGES 32+4 (COVER PAGES)